Discussion of Matter under Rule 146

Re : Issue of Flour Mill Licences

SRI K H. SRINIVAS.—Sir, I beg to move :

"That this House resolves that a Commission of Enquiry, under the provisions of the Commission of Enquiry Act, 1951 (Act No. 60 of 1952) be immediately appointed to go into the charges against the concerned persons, including the Hon'ble Minister Sri C. M. Ibrahim with reference to the issue of Flour Mill Licences with a view to find out whether there was any corruption, favouritism, nepotism, irregularity, impropriety or contravention of any law or rule, departure from normal official procedure or lack of integrity or misuse of Governmental powers or office, on the part of any person concerned".

The question was proposed

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಬೇಡಿಕೆಯ ಚರ್ಚೆ ಆದ ಕಾಲದಲ್ಲಿ ಈ ಸದನದ ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂ ಅವರು ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಈ ಸದನವನ್ನು ಚಕಿತ ಗೊಳಿಸತಕ್ಕ ಬಹಳ ಗಂಭೀರವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದರು. ಏನೆಂದರೆ ಇತ್ತೀಚೆಗೆ ಸರ್ಕಾರ ಸುಮಾರು ೧೫ ಹಿಟ್ಟಿನ ಗಿರಣಿಗಳಿಗೆ ಪರವಾನಿಗೆಯನ್ನು ಕೊಟ್ಟಿದೆ ಆದರಲ್ಲಿಯೂ ಒಂದೇ ದಿವಸ ಅಂದರೆ ದಿನಾಂಕ ೨೯-೫-೧೯೬೦ರಂದು ಸಂಜೆ ಸುಮಾರು ೧೩ ಪರವಾನಿಗೆಗಳನ್ನು ಒಂದು ಕಂತಿನಲ್ಲಿ ಕೊಟ್ಟಿದ್ದಾರೆ. ಇದಕ್ಕೆ ನಿಜವಾಗಿಯೂ ಯಾವುದೇ ಸಕಾರಣಗಳೂ ಇರಲಿಲ್ಲ. ಈ ರೀತಿ ಒಂದೇ ಕಂತಿನಲ್ಲಿ ಒಂದೇ ದಿವಸ, ಸಂಜೆ ೧೩ ಪರವಾನಿಗೆಗಳನ್ನು ಕೊಟ್ಟಿರುವುದಕ್ಕೆ ಬೇರೆ ಕಾರಣಗಳು ಇದ್ದುವು. ಮಾನ್ಯ ಸದಸ್ಯರಾದ ಆರ್ಮುಗಂ ಅವರು ಇದರಲ್ಲಿ ೩೦ ಲಕ್ಷ ರೂಪಾಯಿಗಳ ಒಂದು ವ್ಯವಹಾರ ನಡೆದಿದೆ ಎನ್ನುವ ಗಂಭೀರ ಆಪಾದನೆಯನ್ನು ಮಾಡಿದರು. ಹಾಗೇ ಅವರು ಒಂದು ಸವಾಲನ್ನು ಕೂಡ ಹಾಕಿದರು. ಇದರ ಬಗ್ಗೆ ಒಂದು ಕಮಿಷನ್ ಆಫ್ ಎನ್‌ಕ್ವೈರಿ ನೇಮಿಸಿದರೆ ೧೩ ಜನಗಳನ್ನು ಪೆರೇಡ್ ಮಾಡಿಸುತ್ತೇನೆ. ಇದರ ವಿಚಾರದಲ್ಲಿ ಆಪಾದನೆಗಳನ್ನು ಸಿದ್ಧ ಪಡಿಸುತ್ತೇನೆ, ಇಲ್ಲದಿದ್ದರೆ ನನ್ನ ಶಾಸನ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಷ್ಟೇ ಅಲ್ಲದೆ, ರಾಜಕೀಯ ಜೀವನಕ್ಕೆ ಮುಕ್ತಾಯ ಹಾಕುತ್ತೇನೆ ಅಂತ ಗಂಭೀರವಾದ ಸವಾಲನ್ನು ಸಭೆಯ ಮುಂದೆ ಇಟ್ಟರು. ಮಾನ್ಯ ಸದಸ್ಯರಾದ ಆರ್ಮುಗಂ ಅವರ ಬಗ್ಗೆ ಎಲ್ಲ ಸದಸ್ಯರಿಗೂ ತುಂಬಾ ಗೌರವ ಇದೆ. ಅವರು ಯಾವಾಗಲೂ ಕೂಡ ಹೃದಯ ನಾಟುವ ರೀತಿಯಲ್ಲಿ ಭಾಷಣ ಮಾಡುತ್ತಾರಷ್ಟೆ ಅಲ್ಲದೆ, ಸತ್ಯಾಂಶವನ್ನು ಗ್ರಹಿಸಿ ಮಾತನಾಡುತ್ತಾರೆ. ಅವರು ದ್ವೇಷಾಸೂಯೆಯಿಂದ ಯಾವುದೇ ವಿಚಾರವನ್ನು ಪ್ರಕಟ ಮಾಡಿದ್ದು ನಾನು ಇದುವರೆಗೂ ನೋಡಿಲ್ಲ. ನಾನು ಅವರನ್ನು ಮಂತ್ರಿಯಾಗಿ ನೋಡಿದ್ದೇನೆ, ಇಲ್ಲಿ ಆಪರ ಜೊತೆಯಲ್ಲಿ ಕುಳಿತು ನೋಡಿದ್ದೇನೆ. ಆವರನ್ನು ಕಂಡರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಬಹಳ ಪೆಚ್ಚುಗೆ. ಏಕೆಂದರೆ, ಅವರು ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳ ಕಡೆಯೇ ನೋಡಿಕೊಂಡು ಮಾತನಾಡುತಾ ರೆ. ಯಾರೋ ಬೇಜವಾಬ್ದಾರಿಯಾಗಿ ಏನೋ ಹೇಳಿ ಹೋದರು ಅನ್ನುವ ಹಾಗೆ ಈ ವಿಚಾರ ಇಲ್ಲ. ಇದಂ ಇದ್ದಕ್ಕಿದ್ದಂತೆ ಆಕಾಶದಿಂದ ಸಿಡಿಲು ಬಡಿದಂತೆ ಬಂದಾಗ, ನಾವು ಯೋಚನೆ ಮಾಡಲಿಕ್ಕೆ ಪ್ರಾರಂಭ ಮಾಡಿದೆವು. ಆಪೊತ್ತಿನ ಚರ್ಚೆಯನ್ನು ನಮ್ಮಕೈಯಲ್ಲಿ ಇಟ್ಟುಕೊಂಡಿದ್ದೇವೆ. ಆದರಲ್ಲಿ ಆಪಾದನೆಗಳು

ಅಧೀನ ಕಾರ್ಯದರ್ಶಿಯವರಿಗೆ ಸುತ್ತಿವೆ. ಆವೊತ್ತು ಸತ್ಯ ಏನು ಗೋಚರವಾಯಿತು ಅದರ ಆಧಾರದ ಮೇಲೆ ಮಾತನಾಡಿದರು. ಮಾನ್ಯ ಮಂತ್ರಿಗಳು ಏನು ಹೇಳಿದರು, ಆದರ ಬಗ್ಗೆ ನಾನು ಕೊನೆಗೆ ಬರುತ್ತೇನೆ ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ವಿಜಿಲೆನ್ಸ್ ಕಮಿಷನ್‌ಗೆ ಒಪ್ಪಿಸಿ ಅಂತ ಹೇಳಿದರು. ಅಧಿಕಾರಿಗಳ ಮೇಲೆ ಆಪಾದನೆ ಇದೆ, ವಿಜಿಲೆನ್ಸ್ ಕಮಿಷನ್‌ಗೆ ಒಪ್ಪಿಸಬಹುದು ಅಂತ ಸಲಹೆ ಕೊಟ್ಟರು. ಇದು ಅಂದು ನಮ್ಮ ಸದನದಲ್ಲಿ ನಡೆದಿರತಕ್ಕಂತಹ ವಿಚಾರ. ಅನಂತರ ೧೦ನೇ ತಾರೀಖು ವಿಧಾನ ಪರಿಷತ್ತಿನಲ್ಲಿ ನಿಲುವಳಿ ಸೂಚನೆ ಪ್ರಸ್ತಾಪವಾದಾಗ ಅಲ್ಲಿಯ ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಚಂದ್ರೇಗೌಡರು ನೇರವಾದ ಮತ್ತೊಂದು ಆಪಾದನೆಯನ್ನು ಮಾಡಿದರು ಅಲ್ಲಿ ಏನು ಹೇಳಿದರು ಇದರ ಬಗ್ಗೆ ವಿಚಾರಣೆ ಮಾಡುವಂತಹ ಭರವಸೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಮಾನ್ಯ ಚಂದ್ರೇಗೌಡರು ಏನು ಹೇಳಿದ್ದಾರೆ ಅಂದರೆ ನನ್ನ ಚಾರ್ಜ್ ಅಲ್ಲಿರತಕ್ಕ ಅಧೀನ ಕಾರ್ಯದರ್ಶಿಯ ಮೇಲೆ ಅಲ್ಲ, ಮಂತ್ರಿಗಳ ಮೇಲೆ ಅಂತ ನೇರವಾಗಿ ಆಪಾದನೆ ಮಾಡಿದರು. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ನಾವು ಇಲ್ಲಿ ತಂದಿರುವ ಪ್ರಸ್ತಾವಕ್ಕೆ ಆಧಾರ ಇದು. ಈ ಆಧಾರವನ್ನು ಪ್ರಪ್ರಥಮವಾಗಿ ಪ್ರಸ್ತಾಪ ಮಾಡುತ್ತಿದ್ದೆನೆ. ಆಧ್ಯಕ್ಷರೆ, ಇವೊತ್ತು ಈ ನಿರ್ಣಯವನ್ನು ಮೊದಲು ತೆಗೆದುಕೊಳ್ಳಿ.

(ಶ್ರೀ ಎಸ್. ಎಸ್. ಅರಕೇರಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಬಿಲ್ಲುಗಳನ್ನು ಕೊನೆಗೆ ತೆಗೆದುಗೊಳ್ಳಿ ಅಂತ ಹೇಳಿದ್ದೇವೆ. ಇದಕ್ಕೆ ಕಾರಣ ಏನು ಅಂದರೆ, ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಬಹಳ ಒಳ್ಳೆಯ ವಾತಾವರಣವನ್ನು ಉಂಟು ಮಾಡಿದ್ದಾರೆ. ನಿಜವಾಗಿ ಹೇಳಬೇಕು ಅಂದರೆ, ನಮಗೆ ಇದು ಪ್ರಿಯವಾದ ಕೆಲಸ ಅಲ್ಲ. ಒಂದು ಉತ್ತಮವಾದ ವಾತಾವರಣವನ್ನು ನಿರ್ಮಿಸಿರುವಾಗ, ಇಂಥಹ ಒಂದು ನಿರ್ಣಯವನ್ನು ತರುವುದು ಅಷ್ಟೊಂದು ಪ್ರಿಯವಾದ ಕೆಲಸ ಅಲ್ಲ. ಪ್ರಿಯವೋ, ಅಪ್ರಿಯವೋ, ನಾವು ಶಾಸಕರಾಗಿ ಕೆಲಸ ಮಾಡಲೇ ಬೇಕಾಗುತ್ತದೆ. ಕೆಲವೊಂದು ಸಾರಿ ಮುಖ್ಯ ಮಂತ್ರಿಗಳೂ ಕೂಡ ನಿಷ್ಕೂರವಾಗಿ ಮಾಡಲೇ ಬೇಕಾಗಿ ಬರುತ್ತದೆ. ಆ ಸಂದರ್ಭದಲ್ಲಿ ನಾವೇನೂ ಸಿಟ್ಟು ಮಾಡುವುದಿಲ್ಲ. ಇದನ್ನು ಮೊದಲು ತೆಗೆದುಕೊಳ್ಳಿ, ಕೊನೆಗೆ ಬಿಲ್ಲುಗಳನ್ನು ತೆಗೆದು ಕೊಳ್ಳಿ ಅಂತ ಏತಕ್ಕೆ ಹೇಳಿದ್ದೇವೆ ಅಂದರೆ ಕೊನೆಗೆ ಬಿಲ್ಲುಗಳನ್ನು ಪಾಸ್ ಮಾಡಿ ಜೈಕಾರ ಹಾಕಿ ಹೋಗ ಬೇಕು ಅಂತ ಹೇಳಿದ್ದೇವೆ. ಇದನ್ನು ಯಾವ ಆಧಾರದ ಮೇಲೆ ತಂದೆವು ಅಂದರೆ, ಇವೊತ್ತು ಅನೇಕ ವಿಷಯಗಳು ಅನೇಕ ಜನರ ಗಮನಕ್ಕೆ ಬಂದಿವೆ. ಆವೊತ್ತೇ ಮಾನ್ಯ ಮಂತ್ರಿಗಳು ನಮ್ಮ ಗಮನಕ್ಕೆ ತರಬೇಕಾಗಿತ್ತು. ಅವರು ತರದೇ ಇರತಕ್ಕ ವಿಷಯಗಳು ನಮ್ಮ ಗಮನಕ್ಕೆ ಬಂದಿವೆ. ನಾವು ವಿರೋಧ ಪಕ್ಷದಲ್ಲಿರತಕ್ಕವರು. ಇದರ ಬಗ್ಗೆ ಹೆಚ್ಚು ತಿಳುವಳಿಕೆಯಿಂದ ಅಧ್ಯಯನ ಮಾಡಿ ಸಾಕಷ್ಟು ವಿಚಾರ ಮಾಡಿ ಪ್ರಸ್ತಾಪ ತಂದಿದ್ದೇವೆ. ಇಂತಹ ಒಂದು ಗಂಭೀರವಾದಂಥ ನಿರ್ಣಯವನ್ನು ತರುವ ಬಗ್ಗೆ ಈ ವಿಚಾರಕ್ಕೆ ಯೋಗ್ಯತೆ ಇದೆಯೇ ಅಂತ ಸಾಕಷ್ಟು ಗಂಭೀರವಾಗಿ ಎಲ್ಲ ವಿರೋಧ ಪಕ್ಷದ ನಾಯಕರು ಯೋಚನೆ ಮಾಡಿ ಒಂದೊಂದು ಶಬ್ದಕ್ಕೂ ಸಾಕಷ್ಟು ಮಹತ್ವ ಕೊಟ್ಟು ಈ ಪ್ರಸ್ತಾವ ತಂದಿದ್ದೇವೆ ಅಂತ ಪೀಠಿಕೆಯಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಈಗ ಆಧಾರವನ್ನು ಪ್ರಸ್ತಾಪ ಮಾಡಿದೆ. ವಾಸ್ತವಾಂಶ ಏನೆಂದರೆ ಗಿರಣಿಗಳಿಗೆ ಪರವಾನಿಗೆ ಕೊಡುವ ಪ್ರಶ್ನೆ ಏನಿದೆ, ಇದರಲ್ಲಿ ಅನೇಕ ವಿಚಾರಗಳು ಇವೆ. ಇದು ರಾಜ್ಯಾಂಗದ ೩೧ ಮತ್ತು ೩೨ನೇ ವಿಧಿಗೆ ಸಂಬಂಧಪಡುತ್ತದೆ. ರಾಜ್ಯಾಂಗದ ೩೦ ನೇ ವಿಧಿ ಪ್ರಕಾರ ವ್ಯಾಪಾರ, ಸಾಗಾಣಿಕೆ, ವಿಚಾರ ಬರುತ್ತದೆ. ೩೦ನೇ ವಿಧಿ ಪ್ರಕಾರ, ಪಾರ್ಲಿಮೆಂಟಿಗೆ ಹಕ್ಕು ಇದೆ, ಜನಗಳ ಹಿತದೃಷ್ಟಿಯಿಂದ ಎಲ್ಲೆಲ್ಲಿ ನಿಯಂತ್ರಣ ತರಬೇಕು ಅಂತ ಹಕ್ಕು ಇದೆ. ಇಂಡಸ್ಟ್ರಿಯಲ್ ಲೈಸನ್ಸಿಂಗ್ ಡೆವಲಪ್‌ಮೆಂಟ್ ಅಂಡ್ ರೆಗುಲೇಷನ್ ಆಕ್ಟ್ ೧೯೫೧ ಅಂತ ಒಂದು ಕಾನೂನು ಇದೆ. ಆ ಕಾನೂನನ್ನು ಅನ್ವಯಿಸಿ ಕಾಲ ಕಾಲಕ್ಕೆ ಕೆಲವು ಕೈಗಾರಿಕೆಗಳನ್ನು ಅವರು ನೋಟಿಫೈ ಮಾಡುತ್ತಾರೆ. ಕಾಲ ಕಾಲಕ್ಕೆ ಕೆಲವು ಕೈಗಾರಿಕೆಗಳನ್ನು ಬಿಟ್ಟು ಕೊಡುತ್ತಾರೆ. ಏಪ್ಲೀಷನ್ನಿಗೆ ಬಂದರೆ ೧೯೭೭ರಲ್ಲಿ ಈ ರೀತಿ ಪರವಾನಿಗೆ ಕೊಡತಕ್ಕ ಅಧಿಕಾರ ಏನಿದೆ ಇದು ಶಾಸನದತ್ತವಾದ ಅಧಿಕಾರ. ಸಂಬಂಧಪಟ್ಟ ಅಧಿಕಾರಿಯನ್ನು ಕೆಲವು ಕಡೆ ರಾಜ್ಯ ಸರ್ಕಾರದವರು ಇಂತಹವರಿಗೆ ಅಧಿಕಾರ ಕೊಟ್ಟಿದ್ದೇವೆ ಅಂತ ನೋಟಿಫೈ ಮಾಡಬೇಕಾಗುತ್ತದೆ. ಮೊದಲು ಈ ಅಧಿಕಾರ ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ಗೆ ಇತ್ತು. ಸರ್ಕಾರ ಈ ಅಧಿಕಾರವನ್ನು ವರ್ಗಾವಣೆ ಮಾಡಿದ ಪ್ರಕಾರ ಡೆಪ್ಯುಟಿ ಸೆಕ್ರೆಟರಿ ಫುಡ್ ಅಂಡ್ ಫಾರೆಸ್ಟ್‌ನವರಿಗೆ ಅಧಿಕಾರ ಬಂದಿದೆ. ಅಧಿಕಾರ ಬಂದಿರುವುದನ್ನು ಒಂದು ಕಡೆ ಇಟ್ಟುಕೊಳ್ಳೋಣ. ಕೇಂದ್ರ ಸರಕಾರದವರು ಕಾಲ ಕಾಲಕ್ಕೆ ಬೇರೆ ಬೇರೆ ನಿಯಂತ್ರಣ ಘೋಷಣೆ ಮಾಡುವುದು ಅಥವಾ

ಆದನ್ನೇ ರಿಲ್ಯಾಕ್ಸ್ ಮಾಡುವುದು, ಈ ಎರಡನ್ನೂ ಮಾಡಿಕೊಂಡು ಬಂದಿದ್ದಾರೆ. ಅವರ ತಿಳುವಳಿಕೆಯ ಮೇಲೆ ರಾಜ್ಯದಲ್ಲಿ ದವಸಧಾನ್ಯ ಎಷ್ಟು ಬೆಳೆದಿದೆ, ಎಲ್ಲಿ ಹಾಕಬೇಕು ಅಂತ ಯೋಚನೆ ಮಾಡಿ ಮಾಡುತ್ತಿದ್ದರು. ಹಿಂದೆ ಒಂದು ಬ್ಯಾನ್ ಇತ್ತು ಯಾವುದೇ ಲೈಸನ್ಸ್‌ಗಳನ್ನು ರಾಜ್ಯ ಸರ್ಕಾರದವರು ಕೊಡಕೂಡದು ಅಂತ ಬ್ಯಾನ್ ತಂದರು. ಇಂತಹ ಕೈಗಾರಿಕೆಗಳು ಬರಬಾರದು ಅಂತ ಯಾರೂ ತರಲಿಲ್ಲ, ಈಗಲೂ ತಂದಿಲ್ಲ. ರಾಜ್ಯ ಮಟ್ಟದಲ್ಲಿ ಕೈಗಾರಿಕೆಗಳಿಗೆ ಪರವಾನಿಗೆ ಕೊಡತಕ್ಕದ್ದು ಒಂದು ಮತ್ತೊಂದು ಇದು ಇಲ್ಲದೇ ಇದ್ದರೆ, ಪ್ರತಿಯೊಂದು ಕೂಡ ಕೇಂದ್ರ ಸರ್ಕಾರಕ್ಕೆ ಹೋಗಿ ಬರಬೇಕು ಈ ಎರಡೂ ಪ್ರಶ್ನೆಗಳು ಇದ್ದವು. ಬ್ಯಾನ್ ಅಂದರೆ ಕೈಗಾರಿಕೆ ಇಲ್ಲ ಅಂತ ಮಾಡುವುದು ಅಲ್ಲ. ೨೯ನೇ ಜುಲೈ ೧೯೭೯ರಿಂದ ೨೪ನೇ ಮೇ ೧೯೮೦ರ ವರೆಗೆ ಈ ಅವಧಿಯಲ್ಲಿ ಕೇಂದ್ರ ಸರ್ಕಾರದವರು ಅದನ್ನು ರಿಲ್ಯಾಕ್ಸ್ ಮಾಡಿದ್ದರು. ರಾಜ್ಯಸರ್ಕಾರಗಳು ನಿರ್ದಿಷ್ಟ ಪ್ರಮಾಣದಲ್ಲಿ ಒಂದು ದಿವಸಕ್ಕೆ ೩೦ ಟನ್, ಒಂದು ತಿಂಗಳಿಗೆ ೭೫೦ ಟನ್ ಕೆಪಾಸಿಟಿ ಕೊಡಬಹುದು ಅದಕ್ಕೆ ಕೆಲವು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಆಫ್ ಆರಿಟಿ ಇದ್ದಾರೆ, ಅವರು ಕೊಡಬಹುದು. ಮೇ ತಿಂಗಳು ೨೪ನೇ ತಾರೀಖು ರಿಲ್ಯಾಕ್ಸೇಷನ್ ವಾಪಸ್ಸು ತೆಗೆದು ಕೊಳ್ಳುವ ನಿರ್ಣಯವನ್ನು ಅವರು ಮಾಡಿದರು. ೨೫ನೇ ತಾರೀಖು ರೇಡಿಯೋದಲ್ಲಿ ಪ್ರಕಟವಾಯಿತು ೨೬ನೇ ತಾರೀಖು ಪತ್ರಿಕೆಯಲ್ಲಿ ಬಂದಿದೆ. ೨೯ನೇ ತಾರೀಖು ೫ ಗಂಟೆಗೆ ನಮಗೆ ತಿಳಿದಿರುವ ಪ್ರಕಾರ ಸರ್ಕಾರಕ್ಕೆ ಟೆಲೆಕ್ಸ್ ಮೆಸೇಜ್ ಪ್ರಕಾರ ಆರ್ಡರ್ ಕಮ್ಯುನಿಕೇಟ್ ಆಯಿತಂತೆ. ಈ ೧೩ ಲೈಸನ್ಸ್‌ಗಳನ್ನು ಏನು ಕೊಟ್ಟಿದ್ದಾರೆ ನಮಗೆ ಗೊತ್ತಿರುವಂತೆ ಇದು ಆಗಿರುವುದು ೨೯ನೇ ರಾತ್ರಿ ಟೆಲೆಕ್ಸ್ ಮೆಸೇಜ್ ಬಂದವೇಲೆ ಮಾಡಿರುವಂತ ಕೆಲಸ. ಅದಕ್ಕಾಗಿ ಇದನ್ನು ನಾವು ''ಹಿಟ್ಟಿನ ಗಿರಣಿಯ ಪರವಾನಿಗೆ ಹಗರಣ'' ಅಂತ ಕರೆಯಬೇಕಾಗಿದೆ.

೧೨-೩೦ ಪಿ. ಎಂ.

ನನಗಿಂತ ಮೊದಲು ಶ್ರೀಮಾನ್ ಆರ್ಮುಗಂರವರು ಒಂದು ಹೆಜ್ಜೆ ಮುಂದೆ ಹೋಗಿ ಈ ಪ್ರಕರಣವನ್ನು ''ಶೇಡಿ ವಿಡ್ ನೈಟ್ ಡೀಲ್'' ಅಂತ ಹೇಳಿದ್ದಾರೆ. ಆದ್ದರಿಂದ ನಾನು ಹೇಳಿದ್ದನ್ನು ಮೊದಲು ಹಾಕಿ ಮಾನ್ಯ ಶ್ರೀ ಆರ್ಮುಗಂರವರು ಹೇಳಿದ್ದನ್ನು ಬ್ಯಾಕೆಟ್‌ನಲ್ಲಿ ಯಾದರೂ ಹಾಕಿ. ಅಥವಾ ಅವರು ಹೇಳಿದ್ದನ್ನು ಮೊದಲು ಹಾಕಿ ನಾನು ಹೇಳಿದ್ದನ್ನು ಬ್ಯಾಕೆಟ್‌ನಲ್ಲಿ ಹಾಕಿದರೂ ನನ್ನ ಆಭ್ಯಂತರವಿಲ್ಲ. ಇದು ಮಧ್ಯರಾತ್ರಿಯಲ್ಲಿ ನಡೆದಿರತಕ್ಕಂತಹ ಪ್ರಕರಣ ಎನ್ನುವಂತಹ ತೀರ್ಮಾನಕ್ಕೆ ನಾವು ಬರುವುದಕ್ಕೆ ಪ್ರಮುಖವಾಗಿ ಈ ಕ್ರೋನಾಲಜಿ ಸಾಕು; ಇದರಲ್ಲಿ ಆ ಪ್ರಶ್ನೆ ಉದ್ಭವವಾಗುತ್ತದೆ. ಸರ್ಕಾರದವರು ಅಂತೂ ಈ ಕೆಲಸವನ್ನು ಮಾಡಿಬಿಟ್ಟಿದ್ದಾರೆ. ಮಾಡಿರುವ ಕೆಲಸವನ್ನಾದರೂ ನೋಡೋಣ ಎಂದರೆ, ಅವರು ಮಾಡಿರುವ ಕೆಲಸವನ್ನು ಸಮರ್ಪಕವಾಗಿ ಮಾಡಿದ್ದಾರೆಯೇ ? ಅದನ್ನು ನೋಡುವುದಕ್ಕೆ ಹೋದರೆ ದೊಡ್ಡ ಅಪಾಂತರ ಇದೆ. ೧೩ ಜನಗಳಿಗೆ ಪರವಾನಿಗೆ ಕೊಟ್ಟಿದ್ದಾರೆ. ಬೆಳಗಾಂನಲ್ಲಿ ಶಾಂತಿಲಾಲ್ ರವರಿಗೆ ೬ ತಿಂಗಳ ಹಿಂದೆ ಆತನ ಹೆಸರಿನಲ್ಲಿ ಒಂದು ಲೈಸೆನ್ಸ್ ಕೊಟ್ಟಿರುವುದು ನನಗೆ ಜ್ಞಾಪಕ ಇದೆ. ಮತ್ತೆ ಈಗ ಇಂದು ಆತನ ಹೆಂಡತಿ ಹೆಸರಿನಲ್ಲಿ ಒಂದು ಲೈಸೆನ್ಸ್ ಇದೆ. I think in Mysore this nephew of Shanthilal is given a licence. ಹಾಗಾದರೆ ಒಂದೇ ಕಂಟುಂಬಕ್ಕೆ ಮೂರು ಲೈಸನ್ಸ್ ಕೊಟ್ಟಹಾಗೆ ಆಯಿತು. ಇನ್ನೂ ನೋಡೋಣ, ಇನ್ನೂ ಕೆಲವರು ಇದರೊಳಗೆ ಇದ್ದಾರೆ. ಮೈಲಾಪುರಂ, ಮದ್ರಾಸ್ ಸ್ಟೇಟ್ ಇಲ್ಲಿ ಎರಡು ಜನಗಳಿಗೆ ಲೈಸನ್ಸ್ ಕೊಟ್ಟಿದ್ದಾರೆ. ಒಂದೊಂದು ಕ್ರಮವನ್ನು ಅನುಸರಿಸಿಕೊಟ್ಟಿದ್ದಾರೆ. ಕೋಲಾರದಲ್ಲಿರುವಂತಹ ಕಾಂತಾರಾಜ್‌ರವರು ಈ ಲೈಸನ್ಸಿಗಾಗಿ ಅರ್ಜಿ ಕೊಟ್ಟಿದ್ದಾರೆ. ಅವರ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದಾರೆ. ಆ ರೀತಿ ರಿಜೆಕ್ಟ್ ಮಾಡುವುದಕ್ಕೆ ಕೊಟ್ಟಿಂತಹ ಕಾರಣ ಏನು ಎಂದರೆ, ಅವರು ಸ್ಥಳೀಯ ನಾಗರೀಕರಲ್ಲ ಎನ್ನುವ ಕಾರಣ ಕೊಟ್ಟು ರಿಜೆಕ್ಟ್ ಮಾಡಿದ್ದಾರೆ. ಆದರೆ ಇವರು ಕೊಟ್ಟಿರತಕ್ಕಂತಹದ್ದು ಬೆಂಗಳೂರಿನ ವಿಳಾಸ, ಅವರು ಇರುವುದು ರಾಯಚೂರು, ಇನ್ನೊಂದು ಅವರು ಇರುವುದು ಬೆಳಗಾಂ, ಕೊಟ್ಟಿರುವುದು ಬೆಂಗಳೂರಂ. ಇನ್ನೋಬ್ಬರಿಗೆ ಮದ್ರಾಸ್ ರಾಜ್ಯದವರಿಗೆ ಕೊಟ್ಟಿದ್ದಾರೆ. ಆದ್ದರಿಂದ ಇದನ್ನು ನೋಡಿದರೆ ಇದರಲ್ಲಿ ಪ್ರೈಮಾಫೇಸಿ ನಡೆದಿದೆ ಎಂಬುದಾಗಿ ಗೊತ್ತಾಗುತ್ತದೆ. ಲೈಸನ್ಸಿಗಾಗಿ ಬಂದಂತಹ ಅರ್ಜಿಗಳು ಪೆಂಡಿಂಗ್ ಇದ್ದು ಬ್ಯಾನ್ ಬರುತ್ತದೆ, ಎನ್ನುವ ದೃಷ್ಟಿಯಿಂದ ಕೊಟ್ಟುಬಿಟ್ಟರು ಎನ್ನತಕ್ಕಂತಹ ಅಭಿಪ್ರಾಯ ಪಡುವುದಕ್ಕೂ ಕೂಡ ಅವಕಾಶ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಅವತ್ತಿನ ದಿವಸ ಮಾನ್ಯ ಮಂತ್ರಿಗಳು ಏನು ಉತ್ತರ ಹೇಳಿದರು ಎಂದರೆ, ಅವತ್ತು ಯಾವ ಒಂದು ವಿಚಾರವೂ, ಏನು ಮಾಡಿದರೆಂಬುದು ಹೊರಗೆ ಬರಲಿಲ್ಲ. ಮತ್ತೆ ಇದನ್ನು ಅಧೀನ ಕಾರ್ಯದರ್ಶಿಯವರು

ಇಶ್ಯೂ ಮಾಡಿದ್ದಾರೋ ಅಥವಾ ಮಂತ್ರಿಗಳು ಇಶ್ಯೂ ಮಾಡಿದ್ದಾರೋ ಎನ್ನುತಕ್ಕಂತಹ ವಿಚಾರವನ್ನು ಅವತ್ತೇ ಸ್ಪಷ್ಟಪಡಿಸಿದ್ದಾರೆ. ಏಕೆಂದರೆ. ನನ್ನ ಅನುಭವದಲ್ಲಿದ್ದ ಹಾಗೆ ಇದು ಹೊಸದೇನೂ ಅಲ್ಲ. ಆಳವಾಗಿ ಅಭ್ಯಾಸ ಮಾಡಿ, ಇಶ್ಯೂ ಮಾಡಿ ಎಂಬುದಾಗಿ ಆಧೀನ ಕಾರ್ಯದರ್ಶಿಗೆ ಹೇಳಿದರೂ ಕೂಡ ಅವನ ಹೃದಯ to breath hot and cold ಆಗುತ್ತದೆ. ಇದು ಇಷ್ಟೇ ಅಲ್ಲ. ಅಂದು ಆ ಆಧೀನ ಕಾರ್ಯದರ್ಶಿಗೆ ಪವರ್ ಇತ್ತು ಮಾಡಿದ್ದಾರೆ ಅಂತ ಹೇಳಿದ್ದಾರೆ. ಮತ್ತೆ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡೇ ಮಾಡಿದ್ದೇವೆ, ಬ್ಯಾನ್ ಬರುತ್ತದೆಂದು ತಿಳಿದುಕೊಂಡೇ ಮಾಡಿದ್ದೇವೆಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಯಾವುದೇ ಬ್ಯಾನ್‌ನ್ನು ಮಾಡಿದರೂ ಕೂಡ ರಾಜ್ಯದ ಅಥವಾ ರಾಜ್ಯಗಳ ಹಿತದೃಷ್ಟಿಯನ್ನು ಇಟ್ಟುಕೊಂಡೇ ಮಾಡುತ್ತಾರೆ. ಈ ರೀತಿಯ ಲೈಸನ್ಸ್ ಗಳಿಗೆ ಬಹಳ ಆಕರ್ಷಣೆ ಇದೆ. ಇದಕ್ಕೆ ಕಾರಣ ಏನು ? ನಮ್ಮ ದೇಶದಲ್ಲಿ ಕೈಗಾರಿಕೆ ಅಭಿವೃದ್ಧಿಯಾಗುವ ದೃಷ್ಟಿಯಿಂದ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಕೈಗಾರಿಕೋದ್ಯಮಕ್ಕೆ ಪರಿಹಾರ ಅಲ್ಲ. ಕೆಲವು ಈ ತರಹದವುಗಳು ಸುಲಭವಾದ ಲೈಸನ್ಸ್‌ಗಳು ಇವೆ ಬಂಗಾರದ ಮೊಟ್ಟೆ ಇಡುವಂತಹ ಕೋಳಿಯ ಮೇಲೆಯೇ ಎಲ್ಲರ ಕಣ್ಣು. ಆ ತರಹದ ಲೈಸನ್ಸ್‌ಗಳಲ್ಲಿ ಈ ಹಿಟ್ಟಿನ ಗಿರಣಿಯ ಲೈಸನ್ಸ್ ಒಂದು. ಅದಕ್ಕಾಗಿಯೇ ಇದು ಒಂದು ಆಕರ್ಷಣೀಯವಾದ ಲೈಸನ್ಸ್. ಇದರ ಲೈಸನ್ಸ್‌ನ್ನು ತೆಗೆದುಕೊಂಡರೆ ಸಾಕು ಅದು ಆಟೊಮ್ಯಾಟಿಕ್ ಬ್ಯುಸಿನೆಸ್ ಆಗುತ್ತದೆ. ಇದನ್ನು ತೆಗೆದುಕೊಳ್ಳುವುದೇ ದೊಡ್ಡ ಪರಾಕ್ರಮ. ಒಂದು ಉದ್ದಿಮೆಗೆ ಬೇಕಾದ ಯಾವುದೇ ಪರಾಕ್ರಮ ಇದಕ್ಕೆ ಬೇಕಾಗಿಲ್ಲ. ಲೈಸನ್ಸ್‌ನ್ನು ತೆಗೆದುಕೊಂಡರೆ ಸಾಕು, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ರಿಯಾಯಿತಿ ದರದಲ್ಲಿ ಇವರಿಗೆ ಇಂತಿಷ್ಟು ಕೋಟಾ ಎಂಬುದಾಗಿ ಕೊಡುತ್ತಾರೆ. ಅದೇ ರೀತಿ ಬ್ಯಾಂಕಿನಲ್ಲಿ ಒಬ್ಬೊಬ್ಬರಿಗೂ ೪೦ ಲಕ್ಷ ರೂಪಾಯಿಗಳವರೆಗೂ ಸಾಲ ಸಿಕ್ಕುತ್ತದೆ. ಈ ಪ್ರಕಾರ ಪ್ರತಿ ದಿವಸ ಕೋಳಿ ಬಂಗಾರದ ಮೊಟ್ಟೆ ಇಡುತ್ತದೆ. ಆ ಬಂಗಾರದ ಮೊಟ್ಟೆಯನ್ನು ಮಾರಿಕೊಂಡು ದುಡ್ಡು ಮಾಡುವುದು. ಇದರ ದುರುಪಯೋಗವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಕೇಂದ್ರ ಸರ್ಕಾರದವರಂ ಇದರ ಮೇಲೆ ಕಣ್ಣಿಟ್ಟೇ ಒಂದು ಆಜ್ಞೆಯನ್ನು ಇಟ್ಟುಕೊಂಡು ಅಗತ್ಯ ಬಿದ್ದಾಗ ಆದೇಶವನ್ನು ಕೊಟ್ಟುಕೊಂಡು ಬರುತ್ತಿರುತ್ತಾರೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಯಾವುದೇ ಪ್ರಮಾಣದ ಜವಾಬ್ದಾರಿ ರಾಜ್ಯಸರ್ಕಾರದ ಬಗ್ಗೆ ಇಲ್ಲ ಎನ್ನುವುದು, ಅಥವಾ ಕೇಂದ್ರ ಸರ್ಕಾರ ಬ್ಯಾನ್ ತರುತ್ತದೆಂಬ ಮುಂದಾಲೋಚನೆಯಿಂದ ಮಾಡಿದ್ದೇವೆ ಎಂಬುದಾಗಿ ಮಾತನಾಡತಕ್ಕಂತಹದ್ದು ಅದು ಮಂತ್ರಿಗಳು ಹೇಳುವಂತಹ ಮಾತಾಗುವುದಿಲ್ಲ. I can understand an ordinary man doing something in anticipation of government relaxation. ಒಬ್ಬ ಸಾಧಾರಣ ಮನುಷ್ಯ ನಾಳೆ ಸರ್ಕಾರದವರದ ಏನಾದರೂ ಮಾಡಿಯಾರಪ್ಪ ಎಂಬುದಾಗಿ ಯೋಜನೆ ಮಾಡುವುದು, ನಿಜ. ಆ ರೀತಿ ಯೋಚನೆ ಮಾಡುವುದನ್ನು ನಾವು ಕಂಡಿದ್ದೇವೆ. ಅದು ತಪ್ಪು ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಆದರೆ ಒಂದು ಸರ್ಕಾರದ ಒಬ್ಬ ಮಂತ್ರಿ ಈ ರೀತಿ ಯೋಚನೆ ಮಾಡಿರುವುದು ನೋಡಿದರೆ ಆಶ್ಚರ್ಯವಾಗುತ್ತಿದೆ. ಅದೂ ಬ್ಯಾನ್ ಆರ್ಡರ್ ಬರುವುದಕ್ಕೆ ಮುಂಚೆಯೂ ಅಲ್ಲ. ನಾನು ತಿಳಿದ ಪ್ರಕಾರ, ೨೪ನೇ ತಾರೀಖು ಕೇಂದ್ರ ಸರ್ಕಾರದ ಆಜ್ಞೆಯಾಗಿದೆ. ೨೫ನೇ ತಾರೀಖು ರೇಡಿಯೋದಲ್ಲಿ ಬಂತು. ೨೬ನೇ ತಾರೀಖು ಪತ್ರಿಕೆಯಲ್ಲೂ ಬಂತು. ಲೈಸನ್ಸ್ ಕೊಟ್ಟಿರುವುದು ೨೯-೫-೧೯೮೦ರಂದು. ಆದ್ದರಿಂದ ಮಂತ್ರಿಗಳ ಗಮನಕ್ಕೆ ಗೊತ್ತಿಲ್ಲದೆ ಮಾಡಿದ್ದಾರೆಂದು ಅವರು ಹೇಳುವಹಾಗೇ ಇಲ್ಲ. ಮತ್ತೆ ಗೊತ್ತಿದೆ ಎಂಬುದಾಗಿ ಅವರೇ ಹೇಳಿದ್ದಾರೆ. ಗೊತ್ತಿದ್ದೂ ಮಾಡಿದ್ದಾರೆಂದರೆ, ಅದು ಮಂತ್ರಿ ಕೆಲಸವನ್ನು ಮಾಡಿದಂತಾಗುವುದಿಲ್ಲ. ಸ್ವಲ್ಪ ಕಂತ್ರಿ ಕೆಲಸ ಮಾಡಿದಂತಾಗುತ್ತದೆ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಬಗ್ಗೆ ಜವಾಬ್ದಾರಿ ಇದೆ. ಆದ್ದರಿಂದ ಕೇಂದ್ರ ಸರ್ಕಾರದ ಕಣ್ಣಿಗೆ ಮಣ್ಣು ಎರೆಚುವುದಕ್ಕೆ ಸಾಧ್ಯವಿಲ್ಲ. ಮತ್ತೆ ಒಂದು ಸಾರಿ ಲೈಸನ್ಸ್ ಕೊಟ್ಟರೆ ಅದು ಕೆಲಸ ಮುಂಗಿಯೆತು ಎಂಬುದಾಗಿ ಹೇಳುವುಹಾಗಿಲ್ಲ. Existing units also will have to take licences within 6 months. ಅಥವಾ ಇದು ಸಂಪೂರ್ಣವಾದ ಬ್ಯಾನ್ ಆರ್ಡರ್ ಏನೂ ಅಲ್ಲ. ಆಕಸ್ಮಾತ್ ನಮ್ಮ ರಾಜ್ಯಕ್ಕೆ ಅನುಕೂಲವಾಗಬೇಕೆಂದು ಇದ್ದರೆ ಕೇಂದ್ರ ಸರ್ಕಾರದಿಂದ ಆಜ್ಞೆ ಬಂದ ಮೇಲೂ ಕೂಡ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಗಳು ಕೇಂದ್ರ ಸರ್ಕಾರದವರ ಜೊತೆ ಸಮಾಲೋಚನೆ ಮಾಡಿ ಪರ್ಮಿಷನ್ ತೆಗೆದುಕೊಂಡು ಬರುವುದಕ್ಕೆ ಅವಕಾಶ ಇದೆ. ಇಷ್ಟೆಲ್ಲಾ ಅನುಕೂಲ ಇದ್ದರೂ ಕೂಡ ಬ್ಯಾನ್ ಆರ್ಡರ್ ಬರುತ್ತದೆಂಬ ಉದ್ದೇಶದಿಂದ ಮಾಡಿದ್ದೇವೆ ಎನ್ನುವ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಆ ಆಜ್ಞೆ ಬರುವುದಕ್ಕೆ ಮುಂಚೆಯೂ ಮಾಡಿಲ್ಲ. ಆ ಆಜ್ಞೆ ಬಂದ

ಮೇಲೆ ಅಧೀನ ಕಾರ್ಯದರ್ಶಿಯವರಿಗೆ ಹೇಳಿಸಿ ಮಾಡಿಸಿದ್ದಾರೆ. ಅದನ್ನು ಮಾಡುವುದಕ್ಕೆ ಬದಲಾಗಿ ಕೇಂದ್ರಕ್ಕೆ ಹೋಗಿ ಅಲ್ಲಿ ಸಂಬಧಪಟ್ಟವರ ಜೊತೆ ಸಮಾಲೋಚನೆ ಮಾಡಿಕೊಂಡು ಬರಬಹುದಾಗಿತ್ತು, ಅಷ್ಟೇ ವ್ಯತ್ಯಾಸ. ಆದ್ದರಿಂದ ರಾಜ್ಯ ಹಿತದೃಷ್ಟಿಯಿಂದ ಮಾಡಿದ್ದೇವೆ ಎಂಬುದೂ ಕೂಡ ಸತ್ಯಕ್ಕೆ ದೂರ ವಾದಂತಹ ಮಾತಾಗುತ್ತದೆ ಇಷ್ಟು ನಡೆದಿರತಕ್ಕಂತಹ ವಿಚಾರ ಇದೆ. ಆವತ್ತು ಶ್ರೀಮಾನ್ ಆರ್ಮುಗಂ ರವರು ಸಭೆಯಲ್ಲಿ ಈ ವಿಚಾರವನ್ನು ಎತ್ತಿದಾಗ ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ಅಧೀನ ಕಾರ್ಯದರ್ಶಿಗಳು ಇದನ್ನು ಮಾಡಿದ್ದಾರೆ, ಅದರಲ್ಲೇನಾದರೂ ಭ್ರಷ್ಟಾಚಾರ ನಡೆದಿದೆ ಎಂಬುದಾಗಿ ತಿಳಿದು ಬಂದಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಆ ಅಧಿಕಾರಿ ಬಂದನೇ ತಾರೀಖೇ ರಿಟೈರ್ಡ್ ಆಗಿರತಕ್ಕಂಥವರು. ಆ ಅಧಿಕಾರಿ ರಿಟೈರ್ಡ್ ಆಗಿರುವ ವಿಚಾರ ಮಂತ್ರಿಗಳಿಗೆ ಗೊತ್ತಿರಲೇಬೇಕು. ಗೊತ್ತಿಲ್ಲದಿದ್ದರೆ ಮಂತ್ರಿ ಪದವಿಯಲ್ಲಿ ಕೆಲಸ ಮಾಡುವುದಕ್ಕೆ ನಾಲಾಯಕ್ ಅಂತ ನಾನು ಹೇಳಬೇಕಾಗುತ್ತದೆ. ಈ ವಿಷಯವನ್ನು ಸದನಕ್ಕೆ ಹೇಳಿ ನಮಗೆ ತಪ್ಪು ತಿಳಿವಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ನಮ್ಮನ್ನು ತಪ್ಪುದಾರಿಗೆ ಎಳೆದಿದ್ದಾರೆ. ಇದರಲ್ಲಿ ಅನುಮಾನಾಸ್ಪದವಾದುದು ಮತ್ತು ಮೂಲಭೂತವಾದ ಪ್ರಶ್ನೆ ಏನಿದೆ ಎಂದರೆ, ಅಧೀನ ಕಾರ್ಯದರ್ಶಿಗೆ ಈ ಲೈಸನ್ಸ್‌ನ್ನು ಇಶ್ಯೂ ಮಾಡುವುದಕ್ಕೆ ಅಧಿಕಾರ ಇಲ್ಲ. ಆ ರೀತಿ ಮಾಡ ಬೇಕಾದರೂ ಸರ್ಕಾರದ ನೋಟಿಫಿಕೇಷನ್ ಆಗಬೇಕು. Notified under the statute a statutory authority to issue the licences, Deputy Secretary, Food & Forest Department is the authority to issue licences. ಆದರೆ ಸಂಬಂಧ ಪಟ್ಟಂತಹ ಉಪಕಾರ್ಯದರ್ಶಿಯವರು ನಿಜವೇ ತಾರೀಖಿನಿಂದ ಒಂದನೇ ತಾರೀಖಿನವರೆಗೆ ರಜಾ ಹೋಗಿದ್ದಾರೆ. ಅವರು ರಜಾ ಹೋದಂತಹ ಕಾಲದಲ್ಲಿ ಈ ಅಧೀನ ಕಾರ್ಯದರ್ಶಿಗೆ ಅಧಿಕಾರವನ್ನು ಕೊಟ್ಟಿದ್ದೇವೆ ಎಂಬುದರ ಬಗ್ಗೆ ನೋಟೀಫಿಕೇಷನ್ ಆಗಬೇಕು. ಮತ್ತು ಈ ವಿಷಯ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನವಾಗಬೇಕು. ಆ ಉಪಕಾರ್ಯದರ್ಶಿ ರಜಾ ಹೋದಂತ ಕಾಲದಲ್ಲಿ ಈ ಎಲ್ಲ ವ್ಯವಹಾರಗಳೂ ಮುಕ್ತಾಯವಾಗಿವೆ. ಮತ್ತೆ ಆ ಉಪಕಾರ್ಯದರ್ಶಿ ರಜ ಏಕೆ ಹೋದರು ಎನ್ನುವ ತಕ್ಕಂತಹ ಪ್ರಶ್ನೆ ಉದ್ಭವವಾಯಿತು. ಅದಕ್ಕೆ ಮಾನ್ಯ ಮಂತ್ರಿಗಳು ಹಿಂದೆಯೇ ಅವರು ೭೦ ದಿವಸಗಳ ರಜೆಯನ್ನು ಕೇಳಿ ಅರ್ಜಿಯನ್ನು ಕೊಟ್ಟಿದ್ದರು, ಆದರೆ ಆಗ ರಜೆಯನ್ನು ಕೊಡಲಿಲ್ಲ, ಕೊನೆಗೆ ೬ ದಿವಸ ಕೊಟ್ಟಿದ್ದೇವೆ ಎಂಬುದಾಗಿ ಹೇಳಿದರು. ಮೊದಲೆ ಏಕೆ ರಜಾ ಕೊಡಲಿಲ್ಲ ? ಇದೇ ಸಂದರ್ಭದಲ್ಲಿ ೬ ದಿವಸ ರಜೆಯನ್ನು ಏಕೆ ಕೊಟ್ಟರು ? ಎನ್ನುತಕ್ಕಂತಹ ಪ್ರಶ್ನೆ ಉದ್ಭವಿಸುತ್ತದೆ. ನಮ್ಮ ತಿಳುವಳಿಕೆಗೆ ಬಂದಿರ ತಕ್ಕಂತಹ ವಿಚಾರ ಏನೆಂದರೆ, ಅದು ತಪ್ಪಿದ್ದರೆ ಸ್ಪಷ್ಟಪಡಿಸಬಹುದು. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ನಮ್ಮ ತಿಳುವಳಿಕೆಗೆ ಬಂದಿರತಕ್ಕಂತಹದ್ದನ್ನು ಸಭೆಯ ಮುಂದೆ ಹೇಳುತ್ತಿದ್ದೇನೆ. ನಾವು ಹೇಳು ವುದು ತಪ್ಪು ಅಂತ ಹೇಳಿ ಅದು ಬೇರೆ ಪ್ರಶ್ನೆ. ನಿಜವೇ ತಾರೀಖಿನಿಂದಲೇ ಇದು ಶುರುವಾಗಿದೆ. ಆ ಉಪಕಾರ್ಯದರ್ಶಿಗೆ ಮಂತ್ರಿಗಳು ಈ ರಿತಿ ಲೈಸನ್ಸ್‌ಗಳನ್ನು ಇಷ್ಯೂ ಮಾಡು, ಮಾಡಿದ್ದರೆ ರಜಾ ಹಾಕಿ ಹೋಗು ಎಂಬುದಾಗಿ ಹೇಳಿದ್ದಾರೆ. ಅವನೂ ಪ್ರಯತ್ನ ಪಟ್ಟು ನಿಜವೇ ತಾರೀಖಿನವರೆಗೆ ಬಂದಿದ್ದಾನೆ. ಕೊನೆಗೆ ಒತ್ತಡ ಜಾಸ್ತಿಯಾಗುತ್ತಾ ಬಂದಾಗ ಒತ್ತಡವನ್ನು ತೆಗೆದುಕೊಳ್ಳಲಾರದೆ ರಜಾ ಹಾಕಿ ಹೋದ. ಆ ಸಮಯದಲ್ಲಿ ಈ ಅಧೀನ ಕಾರ್ಯದರ್ಶಿಯಿಂದ ಈ ಎಲ್ಲ ಕೆಲಸ ಆಯಿತು.

ಇದರಲ್ಲಿ ಇನ್ನೊಂದು ಪ್ರಶ್ನೆ ಇದೆ. ಡೆಪ್ಯುಟಿ ಸೆಕ್ರೇಟರಿ ಇಲ್ಲಾ ಎಂದರೆ ಅಂಡರ್ ಸೆಕ್ರೆಟರಿ ರೊಟೀನ್ ಮ್ಯಾಟರ್ಸ್‌ನ್ನು ಡೀಲ್ ಮಾಡಬೇಕಾಗುತ್ತದೆ. ಲೈಸೆನ್ಸ್ ಕೊಡತಕ್ಕ ವಿಷಯದಲ್ಲಿ it is a statutory power vested under the statute to a particular person. Neither his administrative superior nor his administrative subordinate can automatically step into his shoes, so far as the functioning under a statute is concerned and deliver these licences. ಇಲ್ಲಿ ಒಂದು ಪ್ರಶ್ನೆ ಏನೆಂದರೆ, ಡೆಪ್ಯುಟಿ ಸೆಕ್ರೆಟರಿ ರಜಾ ಹೋದಾಗ ನೋಟಿಫಿಕೇಷನ್ ಮಾಡಿ, ಆ ನೋಟಿಫಿಕೇಷನ್ ಪ್ರಕಾರ ಆತನ ಒಂದು ಅಧಿಕಾರವನ್ನು ಅಂಡರ್ ಸೆಕ್ರೆಟರಿಯವರಿಗೆ ಕೊಡಬೇಕಾಗುತ್ತದೆ. ಹಾಗೆ ಕೊಟ್ಟಿದ್ದರೆ ಪರವಾಯಿಲ್ಲ. ಆದರೂ ಕೂಡ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗು ತ್ತದೆ. ಹೀಗೆ ಮಾಡಿದ್ದರೆ ಇಲ್ಲಿ ಬಂದು ಗಂಭೀರವಾದಂತಹ ಪ್ರಶ್ನೆ ಉದ್ಭವವಾಗುತ್ತದೆ. ಈ ಒಂದು ಪ್ರಸಂಗಗಳ ಹಿನ್ನೆಲೆಯಲ್ಲಿ ಇವತ್ತಿನದಿವಸ ನಾವು ಈ ಪ್ರಸ್ತಾವವನ್ನು ಇಲ್ಲಿ ತಂದಿದ್ದೇವೆ. ಇದರಲ್ಲಿ

ನಮ್ಮ ತಿಳುವಳಿಕೆಗೆ ಬಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ತಾವು ಈ ಬಗ್ಗೆ ತನಿಖೆ ಮಾಡುವುದಾದರೆ ಶ್ರೀ ಆರ್ಮುಗಂ ಅವರು ಅನೇಕ ಪುರಾವೆಗಳನ್ನು ಒದಗಿಸಿಕೊಡುವುದಕ್ಕೆ ಸಿದ್ಧರಿದ್ದಾರೆ. ನಾವುಗಳು ನಮಗೆ ತಿಳಿದಿರತಕ್ಕಂತಹ ವಿಷಯಗಳನ್ನು ಹೇಳುವುದಕ್ಕೂ ಸಿದ್ಧರಿದ್ದೇವೆ. ಇಲ್ಲಿ ನಮಗೆ ೩-೪ ಪ್ರಶ್ನೆಗಳು ಉದ್ಭವವಾಗುತ್ತವೆ. ಮೊದಲನೆಯದಾಗಿ, ಇಲ್ಲಿ ಏನು ಲೈಸೆನ್ಸ್ ಕೊಟ್ಟಿದ್ದಾರೆ, ಅವುಗಳನ್ನು ಕೊಡುವುದಕ್ಕೆ ಸಕಾರಣಗಳು ಇವೆಯೇ ? ಒಂದೇ ದಿವಸ ೧೩ ಲೈಸೆನ್ಸ್‌ಗಳನ್ನು ಕೊಟ್ಟಿರುವ ಸಂದರ್ಭದ ಹಿನ್ನೆಲೆ ಏನು ? ಇದು ಕೇಂದ್ರ ಸರ್ಕಾರದ ಆಜ್ಞೆಗೆ ವಿರುದ್ಧ ಆಲ್ಲವೇ ? ಇದು ಇಲ್ಲೀಗಲ್ ಆಗುವುದಿಲ್ಲವೇ ? ಇಲ್ಲಿ ಈ ಡೆಪ್ಯುಟಿ ಸೆಕ್ರೆಟರಿ ರಜಾ ಹೋದ ಮೇಲೆ ಅಲ್ಲಿಯ ಅಂಡರ್ ಸೆಕ್ರೆಟರಿಯವರಿಗೆ ಏನು ಲೈಸೆನ್ಸ್ ಕೊಟ್ಟಿದ್ದಾರೆ ಅದಕ್ಕೆ ಅವರಿಗೆ ಅಧಿಕಾರ ಕೊಡಲಾಗಿತ್ತೇ ? ಇಲ್ಲಿ ಮಂತ್ರಿಗಳು ಹಸ್ತಕ್ಷೇಪ ಮಾಡಿದ್ದಾರೆಯೇ ಅಥವಾ ಅಧಿಕಾರಿಯೇ ಹಸ್ತಕ್ಷೇಪ ಮಾಡಿದ್ದಾರೆಯೇ ಎಂಬ ಈ ಎಲ್ಲಾ ಪ್ರಶ್ನೆಗಳೂ ಇಲ್ಲಿ ಉದ್ಭವವಾಗುತ್ತವೆ. ಈ ಒಂದು ೧೩ ಲೈಸೆನ್ಸ್‌ಗಳನ್ನು ಕೊಟ್ಟ ಈ ಪ್ರಸಂಗ ಕೋಟ್ಯಾಂತರ ರೂಪಾಯಿಯ ವ್ಯವಹಾರವಿದ್ದು ಇದು ಚಿನ್ನದ ಮೊಟ್ಟೆಯನ್ನು ಇಡತಕ್ಕಂತಹ ಕೋಳಿಯ ಕಥೆಯಂತಹ ವಿಷಯವಾಗಿದೆ. ರಾಜ್ಯದ ಹಿತದೃಷ್ಟಿಯಿಂದ ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಇಲ್ಲಿ ಹೇಳುತ್ತಿದ್ದೇನೆ. ನಾನೂ ಕೂಡ ಸಚಿವನಾಗಿ ಕೆಲಸ ಮಾಡಿದ್ದೇನೆ. ಒಬ್ಬ ಅಧೀನ ಕಾರ್ಯದರ್ಶಿಗೆ ಇಂತಹ ಒಂದು ಕೆಲಸ ಮಾಡುವಂತಹ ಧೈರ್ಯ ಬರಲಾರದೆಂದು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಇಂತಹ ಒಂದು ವಿಷಯದ ಬಗ್ಗೆ ಅವನು ಸಹಿ ಮಾಡುವಾಗ ಅವನ ಕೈ ಹೇಗೆ ನಡುಗುತ್ತಿತ್ತೆಂಬುದನ್ನು ನಾವು ಇಲ್ಲಿ ಕಲ್ಪನೆ ಮಾಡಿಕೊಳ್ಳಬಹುದಾಗಿದೆ. ಕೆಲವು ವಿಷಯಗಳಲ್ಲಿ ಮಂತ್ರಿಯಾಗಿ ನಾನೇ ಆರ್ಡರ್ ಮಾಡಿದ್ದೇನೆ. ನಿನಗೆ ಏನು ಭಯ ನೀನು ಸಹಿ ಹಾಕು ಎಂದು ಹೇಳಿದರೂ ಸಹಾ ಆ ಅಧಿಕಾರಿ ಸಾರ್ ಹೀಗೆ ಮಾಡಿದರೆ ಏನಾಗುತ್ತದೆಂದು ಆತನೇ ಕೇಳುತ್ತಾನೆ. ಇಂತಹ ಎಷ್ಟೋ ಪ್ರಸಂಗಗಳನ್ನು ನಾನು ಕಂಡಿದ್ದೇನೆ. ಇಷ್ಟು ಭಯವುಳ್ಳ ಅಧಿಕಾರಿ ಹೇಗೆತಾನೇ ಸಹಿ ಮಾಡುತ್ತಾನೆ. ಇಂತಹ ಅಧಿಕಾರಿ ೧೩ ಮಿಲ್‌ಗಳಿಗೆ ಲೈಸೆನ್ಸ್‌ನ್ನು ಕೊಟ್ಟ ಎಂದರೆ ನನಗೆ ಕಾಗೆ ಮತ್ತು ಗುಬ್ಬಿಯ ಕಥೆ ನೆನಪಿಗೆ ಬರುತ್ತದೆ. ಇದನ್ನು ನಿಜವಾಗಿಯೂ ಹೇಳಬೇಕೆಂದರೆ ಇಂತಹ ವಿಷಯಗಳನ್ನು ಕ್ಯಾಬಿನೆಟ್‌ನಲ್ಲಿ ನಿರ್ಣಯ ಮಾಡಬೇಕಾಗುತ್ತದೆ. ಈ ಬಗ್ಗೆ ಒಬ್ಬ ಮಂತ್ರಿ ಕೂಡಾ ತಾನೇ ಸ್ವಂತವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕೂನೇ ಪಕ್ಷ ಇದನ್ನು ಮುಖ್ಯಮಂತ್ರಿಗಳ ಗಮನಕ್ಕಾದರೂ ತರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರೂ ಕೂಡ ಕ್ಯಾಬಿನೆಟ್ ಮುಂದೆ ಇದನ್ನು ಇಟ್ಟು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಬೇಡ ಕೊನೇ ಪಕ್ಷ, ಮಾನ್ಯ ಮುಖ್ಯಮಂತ್ರಿಗಳ ಮೇಲೆ ಬೇರೆ ಮಂತ್ರಿಗಳು ವಿಶ್ವಾಸವಿಟ್ಟಿದ್ದ ಪಕ್ಷದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳೇ ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆಂದು ಹೇಳಿದರೆ ಅದು ಬೇರೆ ಪ್ರಶ್ನೆ ಆಗುತ್ತಾ ಇತ್ತು. ಏನೂ ಇಲ್ಲದೆ ಇಲ್ಲಿ ಆ ಅಂಡರ್ ಸೆಕ್ರೆಟರಿಯು ಮುಂದಿಗೆ ಈ ಒಟ್ಟಿಯನ್ನು ಸುತ್ತುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆ ಒಟ್ಟಿ ಅವನ ತಲೆ ಮೇಲೆ ಇರದೇ ಅದು ಜಾರಿ ಬೇರೆಯವರ ಕಾಲಿಗೆ ಸಿಕ್ಕಿ ಕೊಳ್ಳುವ ಪರಿಸ್ಥಿತಿ ಬರುತ್ತದೆ ಇಲ್ಲಿ ಇಂತಹ ಒಂದು ಪ್ರಶ್ನೆ ಅಡಗಿರುವುದರಿಂದ ಇದನ್ನು ಹೇಗೆ ಬಗೆಹರಿಸಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಈ ಬಗ್ಗೆ ಏನೇನು ಇದೆ ಅದನ್ನೆಲ್ಲಾ ಕೊಡಿ ನಾನು ಟಾಪ್ ಆಫೀಸರ್‌ಗಳಿಂದ ಎನ್‌ಕ್ವಯರಿ ಮಾಡಿಸುತ್ತೇನೆಂದು ಹೇಳಿದರು, ಇವತ್ತು ಈ ಒಂದು ಟಾಪ್ ಆಫೀಸರ್‌ಗಳಿಂದ ಎನ್‌ಕ್ವಯರಿ ಮಾಡಿಸುವುದು ಒಂದು ದೃಷ್ಟಿಯಿಂದ ಸಾಧ್ಯವಿಲ್ಲ. ಇಲ್ಲಿ ಈ ಒಂದು ಅಧಿಕಾರಿಯ ಪ್ರಶ್ನೆ ಅಲ್ಲ. ಇಲ್ಲಿ ಒಬ್ಬ ಮಂತ್ರಿಗಳ ಹಸ್ತಕ್ಷೇಪದ ಪ್ರಶ್ನೆ ಇರುವುದರಿಂದ ಯಾವ ಟಾಪ್ ಅಧಿಕಾರಿ ಏನು ಮಾಡುವುದಕ್ಕಾಗುತ್ತದೆ ? ಈ ಟಾಪ್ ಅಧಿಕಾರಿಗಳೆ ಟಾಪ್‌ನಲ್ಲಿವನ್ನೂ ಇರುವುದಿಲ್ಲ.

ಶ್ರೀ ಎ. ಲಕ್ಷ್ಮಿಸಾಗರ್.—ಟಾಪ್‌ನಲ್ಲಿ ಮಂತ್ರಿಗಳು ಕುಳಿತಿರುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್. ಆ ನಂತರ ಈ ಟಾಪ್ ಅಧಿಕಾರಿಗಳ ಗತಿ ಏನಾಗುತ್ತದೆಂದು ನೇರವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಟಾನ್ಸ್‌ಫರ್ ಆಗುತ್ತದಷ್ಟೇ.

ಶ್ರೀ ಕೆ.ಎಚ್. ಶ್ರೀನಿವಾಸ್ —ಈ ಅಧಿಕಾರಿಗಳ ಒಂದು ಸ್ವಭಾವ ಏನೆಂದರೆ, ಅವರು ಮಂತ್ರಿಗಳ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವ ಚಟದಿಂದ ಕೂಡಿರುವವರಾಗಿರುತ್ತಾರೆ. ಆವರ

ಮನಸ್ಸಿನಲ್ಲಿ ಏನು ಇವೆ ಎಂದು ತಿಳಿದುಕೊಂಡು ಆ ರೀತಿ ಬರೆದುಬಿಡುತ್ತಾರೆ. I have seen top officers saluting my Private Secretary when I was a Minister. It is nonsense, because he wants to know what is working in the mind of the Minister. ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಇಬ್ರಾಹಿಂರವರ ಮೇಲೆ ಆಷ್ಟಷ್ಟಕ್ಕೆ ಎಂದು ತಿಳಿದುಕೊಂಡು ಬಿಟ್ಟರೆ ಆಗ ಈ ಅಧಿಕಾರಿಗಳು ಮಾನ್ಯ ಇಬ್ರಾಹಿಂರವರ ಮೇಲೆ ತಪ್ಪು ಹೊರಿಸಿ ಬರೆದು ಬಿಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದವರಿಗೆ ಏನು ಬುದ್ಧಿ ಇಲ್ಲವೆ. ಏಕೆ ಹೀಗೆಲ್ಲಾ ಮಾಡುತ್ತಿದ್ದಾರೆಂದು ಹೇಳಿದರೆ ಆಗ ಅವರು ಈ ಪ್ರಕರಣದಲ್ಲಿ ಏನೂ ಇಲ್ಲಾ ಎಂದು ಬರೆದುಬಿಡುತ್ತಾರೆ. ಈ ರೀತಿ ಮಂತ್ರಿಗಳ ಒಂದು ಮನಸ್ಸನ್ನು ತಿಳಿದುಕೊಂಡು ಅವರು ವರದಿ ಕೊಡುವುದರ ಬಗ್ಗೆ ಆಲೋಚಿಸಿರುತ್ತಾರೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಎಷ್ಟೇ Out Sporken ಇದ್ದರೂ ಸಹಾ ಅಷ್ಟೇ deep ಇದ್ದಾರೆ. ಅವರು ಬರೀ Out Spoken ಎಂದು ತಿಳಿದುಕೊಂಡಿದ್ದರೆ ನಾವು ದಡ್ಡರಾಗುತ್ತೇವೆ. ಆದ್ದರಿಂದ ಈ ಒಂದು ಪ್ರಕರಣದಲ್ಲಿ ಟಾಪ್ ಅಧಿಕಾರಿಗಳಿಂದ ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲ. ಇದರಿಂದ ನಿಜ ಹೊರಬರುವುದಿಲ್ಲ. ಲೋಕ ಆಯುಕ್ತ ಏನಾಯಿತು ? ಆದ್ದರಿಂದ ನಾನು ಈ ಮೂಲಕ ಸರ್ಕಾರದ ಗಮನವನ್ನು ಪರಿಸುವುದೇನೆಂದರೆ ದಯಮಾಡಿ ಈ ಬಗ್ಗೆ ವಿಚಾರಣೆ ನಡೆಸಿ. ಕೇವಲ ಶ್ರೀ ಇಬ್ರಾಹಿಂ ಅವರ ವಿರುದ್ಧ ಇದನ್ನು ತರುತ್ತಿದ್ದೇವೆ ಎಂದು ಭಾವನೆ ಮಾಡಿಕೊಳ್ಳಬೇಡಿ. ಮಾನ್ಯ ಇಬ್ರಾಹಿಂ ಅವರನ್ನು ನಾನು ಬಹಳ ಕಾಲದಿಂದ ನೋಡಿದ್ದೇನೆ. ನಾನೂ ಅವರ ಮೇಲೆ ವಿಶ್ವಾಸವನ್ನು ಇಟ್ಟಿದ್ದೇನೆ. ಆದರೆ ಅವರು ಮಂತ್ರಿಗಳಾದ ಮೇಲೆ ಅವರ ಮೇಲೆ ವಿಶ್ವಾಸವನ್ನು ಇಟ್ಟಿಲ್ಲ. ಆದನ್ನು ಅವರೂ ಒಪ್ಪುತ್ತಾರೆಂದು ಕಾಣುತ್ತದೆ. ಆದರೆ ಇಲ್ಲಿ ವೈಯುಕ್ತಿಕವಾದ ಪ್ರಶ್ನೆ ಬರುವುದಿಲ್ಲ. ಅಥವಾ ಯಾವುದೋ ಯುವಕನ ಒಂದು ತಲೆಯನ್ನು ಒಡೆಯಬೇಕೆಂಬ ಚಪಲವಲ್ಲ. ಅಥವಾ ಯಾವುದೇ ಒಂದು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರತಕ್ಕಂತಹ ಅಥವಾ ಬಂದಿರತಕ್ಕಂತಹ ಮಂತ್ರಿ ಪದವಿಯ ತಲೆಗೆ ಹೊಡೆಯಬೇಕೆನ್ನುವ ಹವ್ಯಾಸ ನನಗಿಲ್ಲ. ಮಾನ್ಯ ಇಬ್ರಾಹಿಂ ಅವರನ್ನು ಮಂತ್ರಿ ಪದವಿಯಿಂದ ಇಳಿಸಿ ನಮ್ಮ ಮನುಷ್ಯರ್ಯಾರನ್ನಾದರೂ ಮಂತ್ರಿ ಮಾಡಿ ಎಂದು ಹೇಳುತ್ತಾ ಇಲ್ಲ. ಆದಕ್ಕೆ ಸೂಕ್ತರಾದವರ್ಯಾರನ್ನು ಬೇಕಾದರೂ ಮಂತ್ರಿ ಮಾಡಲಿ. ಆಂದರೆ ನಾವು ಇಲ್ಲಿ ಈ ಒಂದು ಪ್ರಕರಣವನ್ನು ಲೋಕದ ಹಿತದೃಷ್ಟಿಯಿಂದ ಈ ಸದನದ ಮುಂದೆ ಚರ್ಚಿಸುತ್ತಿದ್ದೇವೆ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಆರ್.ಗೌ ಅವರು ಗಂಭೀರವಾದಂತಹ ಆಪಾದನೆಗಳನ್ನು ಮಾಡಿದ್ದಾರೆ. ಅಸ್ತ್ರ ಬಿಟ್ಟಾಗ ಅದಕ್ಕೆ ಪರಮಾರ್ಜನೆ ಆಗಲೇಬೇಕು. ಇದನ್ನು ಹಾಗೇ ಬಿಟ್ಟು ಬಿಟ್ಟರೆ ಇಡೀ ಲೋಕವನ್ನೇ ತಿಂದುಬಿಡುತ್ತದೆಂದು ನಾನು ಹೇಳುತ್ತೇನೆ. ಆದುದರಿಂದ ಇದಕ್ಕೆ ಬೆರೆ ಏನೂ ಮಾರ್ಗವೇ ಇಲ್ಲ ಎಂದು ಹೇಳಿ ಕಮಿಷನ್ ಆಫ್ ಎನ್ಕ್ವೈರಿ ಮಾಡಿ ಎಂದು ಕೇಳಿದ್ದೇವೆ. ಬೇರೇ ರೀತಿಯ ಒಂದು ಪರಿಹಾರ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ತೋರಿದರೆ ಅದರ ಬಗ್ಗೆ ಅವರು ಹೇಳಲಿ. ಆದರೆ ನಾವು ಈ ಬಗ್ಗೆ ಸಾಕಷ್ಟು ವಿಚಾರ ಮಾಡಲಾಗಿ ಯಾವುದೇ ಒಂದು ರೀತಿಯ ಪರಿಹಾರ ಈ ಬಗ್ಗೆ ಕಂಡುಬರುತ್ತಾ ಇಲ್ಲ. ಇವತ್ತು ನಮ್ಮ ರಾಜ್ಯ ಬರೀ ಕಡತಗಳ ರಾಜ್ಯವಾಗಿದೆ. ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿಗಳಾಗಿರಲಿ, ನಿಜವಾಗಿಯೂ ರಾಜ್ಯವನ್ನು ಆಳುತ್ತಿರುವುವು ಫೈಲ್‌ಗಳು ಮಾತ್ರ ಫೈಲ್‌ಗಳ ಒಂದು ಆಧಾರಹ ಮೇಲೆ ರಾಜ್ಯ ನಡೆಯುತ್ತಿದೆ. ಈಗ ರಾಜ್ಯಭಾರದಲ್ಲಿ ಮನುಷ್ಯನ ಮೇಲೆ ನಂಬಿಕೆ ಇಡುತ್ತಾ ಇಲ್ಲಾ. ಎಲ್ಲಾ ನಂಬಿಕೆ ರೂಲ್ಸ್ ಪಂತ್ತು, ರೆಗ್ಯೂಲೇಷನ್ಸ್‌ಗಳನ್ನು ಹೊತ್ತಂತ ಫೈಲ್‌ಗಳ ಮೂಲಕ ಇಟ್ಟುಕೊಳ್ಳಲಾಗಿದೆ. ವ್ಯಕ್ತಿಗಳ ಮೇಲೆ ಇರುವಂತಹ ನಂಬಿಕೆ ಹೊರಟುಹೋಗಿದೆ. ಈ ದಿನ ವ್ಯಕ್ತಿ ವ್ಯಕ್ತಿಯನ್ನು ಸಂಶಯಾತೀತವಾಗಿ ನೋಡುವಂತಹ ಪರಿಸ್ಥಿತಿಯನ್ನು ಮನುಷ್ಯರೇ ಕಲ್ಪಿಸಿಕೊಂಡಿದ್ದಾರೆ. ಒಬ್ಬ ಅಧಿಕಾರಿ ಬಳಿಗೆ ಒಬ್ಬ ಹೋಗಿ ಕೇಳಿದರೆ ಅವನು ಇನ್ನೊಬ್ಬ ಅಧಿಕಾರಿಯ ಮೇಲೆ ಅದನ್ನು ಹೇರಿ ನುಣುಚಿಕೊಳ್ಳುವ ಪರಿಸ್ಥಿತಿ ಇದೆ. ಸಾರ್ವಜನಿಕ ಜೀವನದಲ್ಲಿ ಸಂಶಯಾತೀತವಾದ ಗುಣವನ್ನು ಬೆಳೆಸಿಕೊಂಡಿರುವುದೇ ಈ ಒಂದು ವಿಷಯಕ್ಕೆ ಕಾರಣವಾಗಿದೆ. ಯಾವ ಒಂದು ವಿಷಯಕ್ಕೂ ಫೈಲ್ ಮೇಲೆ ಡಿಫೆಂಡ್ ಆಗಬೇಕಾಗಿದೆ. ಮನುಷ್ಯನಲ್ಲಿ ಪ್ರಾಮಾಣಿಕತೆ ಕ್ಷೀಣಿಸುತ್ತಾ ಇದೆ. ಕೆಲವೊಂದು ಬಾರಿ ಈ ಫೈಲ್‌ಗಳ ಬಗ್ಗೆಯೂ ಸ್ವಲ್ಪ ಹುಷಾರಾಗಿ ಇರಬೇಕಾಗುತ್ತದೆ. ಕೆಲವು ಬಾರಿ ಫೈಲ್ ಒಳಗೆ ಏನೂ ಅಂತಹ ಮಹತ್ವದ ವಿಷಯ ಇರುವುದಿಲ್ಲ ಬರೀ ಚೋಟಾ ಸಹಿ ಹಾಕೋಣವೆಂದಿದ್ದರೂ ಅದನ್ನು ಸುಮ್ಮನೆ ನೋಡುವ ಎಂದು ಒಳ ಪುಟಗಳನ್ನು ನೋಡಿದಾಗ ಅದರ ಒಳಗಡೆ ಹಾವು ಚೇಳುಗಳು ತುಂಬಿ ತುಳುಕಾಡುತ್ತಿರುತ್ತವೆ. ಕೆಲವೊಂದು ಬಾರಿ ಏನೋ ಭಾರೀ ಪ್ರಕರಣ ಇದರಲ್ಲಿ ಅಡಕವಾಗಿದೆ ಎಂದು

ಆ ಫೈಲನ್ನು ತಿರುವಿಹಾಕಿ ನೋಡಿದಾಗ ಆದರಲ್ಲಿ ಮೂರು ಕಾಸಿನ ವಿಚಾರವೂ ಇರುವುದಿಲ್ಲ. ಇದನ್ನು ಸತಃ ನಾನು ಮಂತ್ರಿಯಾಗಿದ್ದಾಗ ಸ್ಪಷ್ಟವಾಗಿ ಅನುಭವಿಸಿ ಅನುಭವ ಪಡೆದುಕೊಂಡಿದ್ದೇನೆ. ಬೇರೆ ಯವರ ಅನುಭವ ಬೇರೆಯೇ ಇರುತ್ತದೆ.

ಇದು ಹೇಗೆ ಎಂದರೆ ಹಾವು ಹುತ್ತದ ಒಳಗೆ ಸೇರಿಕೊಂಡು ಬಿಟ್ಟರೆ. ಹಾವು ಇಂಥಾ ಕಡೆ ಬರುತ್ತ ದೆಂದು ಹೇಳುವುದಕ್ಕಾಗುವುದಿಲ್ಲ ಬಾಲದ ತುದಿ ಹುತ್ತದ ಮೇಲೆ ಕಾಣುತ್ತಿದ್ದರೂ ಅದು ಕೆರೆಹಾವೋ ನಾಗರಹಾವೋ ಯಾವುದು ಎಂದು ಹೇಳುವುದಕ್ಕೆ ಆಗುವುದಿಲ್ಲ. ಡೆಪ್ಯುಟಿ ಸೆಕ್ರೆಟರಿ, ಸೆಕ್ರೆಟರಿಯವರನ್ನು ತನಿಖೆಗೆ ಕಳುಹಿಸಿದರೆ ಅವರು ಏನು ಇದೆ ಎಂದು ಹೇಳುತ್ತಾರೆಂದರೆ, ಇಂಥಾ ಸಂದರ್ಭಗಳಲ್ಲಿ ಹಾವೇ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ಕಮಿಷನ್ ಆಫ್ ಎನ್ಕ್ವೈರಿ ಮಾಡಿದರೆ ಅವರು ಬಾಲದ ತುದಿಯನ್ನು ಹಿಡಿದು ಎಳೆದರೆ ಹಾವು ಬರುತ್ತದೆ, ಆದರ ಮುಂಡ ಗೊತ್ತಾಗುತ್ತದೆ. ಆಗ ಅದು ವಿಷದ ಹಾವೋ ಅಥವಾ ಒಳ್ಳೆಯ ಹಾವೋ ಎನ್ನುವುದು ತಿಳಿಯುತ್ತದೆ. ನನಗೆ ಮಾನ್ಯ ಸಚಿವರ ಮೇಲೆ ವೈಯಕ್ತಿಕವಾದ ಯಾವುದೇ ದ್ವೇಷಾಸೂಯೆ ಇಲ್ಲ. ಅವರು ಪ್ರಾಮಾಣಿಕವಾದ ಆಕಾಂಕ್ಷೆಯಿದ ಹೇಳಿಕೆ ಯನ್ನು ಕೊಟ್ಟು ಈ ಸಮಸ್ಯೆ ಮುಕ್ತಾಯವಾದರೆ ನಮಗೆ ಬಹಳ ಸಂತೋಷ. ಆದ್ದರಿಂದ ಕಮಿಷನ್ ಆಫ್ ಎನ್ಕ್ವೈರಿ ನೇಮಕ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನೊಂದು ಡಿಮ್ಯಾಂಡ್ ಇಟ್ಟಿರತಕ್ಕಂಥಾದ್ದು ರೈತರಿಗೆ ಸಂಬಂಧಪಟ್ಟದಾಗಿರುತ್ತದೆ. ಈ ಬೇಡಿಕೆಯ ಜೊತೆಯಲ್ಲಿ ಅದನ್ನೂ ಇಟ್ಟಿರುವುದರಿಂದ ಇಷ್ಟರಲ್ಲಿಯೇ ಈ ಸದನ ಮುಕ್ತಾಯವಾಗುವುದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ಚರ್ಚೆಯ ಕಾಲದಲ್ಲಿ ಮಾತನಾಡಬೇಕೆಂದು ಹೇಳಿದ್ದಾರೆ. ಅದು ಇರಲಿ. ಮಾನ್ಯ ಇಬ್ರಾಹಿಂರವರನ್ನು ಮಂತ್ರಿಮಂಡಲದಿಂದ ವಜಾ ಮಾಡಿ ಎಂದು ಬಾಯಿ ಚಪಲಕ್ಕೆ ಹೇಳುತ್ತಿಲ್ಲ. ನಾವು ಹೇಳುವ ಕಾರಣ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಅವರಿಗೆ ಬಿಟ್ಟಿರತಕ್ಕಂಥಾದ್ದು. ಇದಕ್ಕೆ ಮೂಲ ಕಾರಣ, ಎನ್ಕ್ವೈರಿ ಸರಿಯಾದ ರೀತಿಯಲ್ಲಿ ಆಗುವಂತೆ ಮಾಡಲು ಮಂತ್ರಿಯಾಗಿ ಅದೇ ಖಾತೆಯನ್ನು ನಿರ್ವಹಿಸಿಕೊಂಡಿರುವುದ ರಿಂದ ಅವರ ಫೈಲುಗಳು ಎನ್ಕ್ವೈರಿಗೆ ಬರಲು ಸಾಧ್ಯವಾಗುವುದಿಲ್ಲ. ಎರಡನೆಯದು, ಈವತ್ತಿನ ದಿವಸ ಬೆಲೆ ಏರಿಕೆ ಏನು ಇರುತ್ತದೆ ಆನರ ಬಗ್ಗೆ ಮಾನ್ಯ ಇಬ್ರಾಹಿಂರವರು ಇಂಥಾ ಎಫೆಕ್ಟೀವ್ ಮಂತ್ರಿ ಯಾಗಿ ಇಲಾಖೆಯಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎನ್ನುವ ಭಾವನೆಗೆ ಅವಕಾಶವಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರಬಹುದು. ಹಿಂದೆ ಒಂದು ಸಾರಿ ಶ್ರೀ ಕೆ. ಎಚ್. ಪಾಟೀಲ್‌ರವರು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಮಂತ್ರಿಗಳಾಗಿದ್ದಾಗ ಎಲ್ಲೆಡೆಗಳಲ್ಲೂ ಬ್ಲಾಕ್ ಮಾರ್ಕೆಟನ್ನು ನಿಲ್ಲಿಸುವ ಪ್ರಯತ್ನ ಮಾಡಿ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರು. ಇಂಥಾ ಒಂದು ಯಾವ ಪರಿಣಾಮ ಕಾರಿಯಾದ ಪ್ರಯತ್ನವನ್ನೂ ಈ ಮಾನ್ಯ ಮಂತ್ರಿಗಳು ಮಾಡಿದ್ದು ಕಾಣಲಿಲ್ಲ. ಇನ್ನು ಇವರ ಮೇಲೆ ಬೇರೆ ಬೇರೆಯಾದ ಆಪಾದನೆಗಳು ಇರುತ್ತವೆ. ಈ ರೀತಿ ಬೆಲೆ ಏರಿಕೆಗೂ ಒಂದು ರೀತಿಯಾದ ಮಿತಿ ಇರುತ್ತದೆ. ಇದನ್ನು ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ಇವರನ್ನು ಮಂತ್ರಿಗಳಾಗಿ ಇಟ್ಟು ಕೊಂಡಿರತಕ್ಕಂಥಾದ್ದು ಸಾಧ್ಯವಿಲ್ಲ. ದುರಾದೃಷ್ಟವಶಾತ್, ಮಂತ್ರಿಗಳಾಗಿ ಅನೇಕ ಆರೋಪಗಳು ಅವರ ಮೇಲೆ ಬಂದಿರುವುದರಿಂದ ಅವರು ಮಂತ್ರಿಗಳಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಇನ್ನೂ ೩೦ ವರ್ಷಗಳಾಗಿರುತ್ತದೆ. ಮುಂದೆ ಒಳ್ಳೆಯ ಭವಿಷ್ಯವಿದೆ. ಅವರು ತಮ್ಮ ಕೆಚ್ಚೆದೆಯನ್ನು ಯುವಕರಿಗೆ ತೋರಿಬೇಕು. ಏನ್ಕ್ವೈರಿ ಆಗಿ ಅದರಲ್ಲಿ ಅವರು ತಪ್ಪಿತಸ್ಥರಲ್ಲ ಎನ್ನುವ ತೀರ್ಮಾವಾದರೆ ನಮಗೆ ಸಂತೋಷ. ಅವರನ್ನು ಟೀಕೆ ಮಾಡಬೇಕು ಎಂದು ಟೀಕೆ ಮಾಡುವುದಾಗಲಿ, ಅಥವಾ ಸರ್ಕಾರ ದವರು ಇನ್‌ಫರ್‌ಮೇಷನ್ ವಿಂಗ್ ಆಗಿ ಕೆಲಸ ಮಾಡಬೇಕೆಂದು ಹೇಳುವುದಾಗಲಿ ಅಲ್ಲ. ''ಇಂದಿರಾಯ ತಕ್ಷಾಯಸ್ವಾಹ'' ಎಂದು ಪತ್ರಿಕೆಗಳಲ್ಲಿ ಬರಲಿ ಎಂದು ಈ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀ ಇಬ್ರಾಹಿಂರವರ ಬಗ್ಗೆ ನಮಗೆ ಕರುಣೆ ಇಲ್ಲವೆಂದಲ್ಲ ಅವರ ಬಗ್ಗೆ ವೈಯಕ್ತಿಕವಾಗಿ ನಮಗೆ ಯಾವ ದ್ವೇಷವೂ ಇಲ್ಲ ಆದರೆ ಅವರ ಮೇಲೆ ಆರೋಪಗಳು ಬಂದಿದೆ ಎನ್ನುವ ವಿಚಾರ ಈ ಸಭೆಯ ಮುಂದೆ ಬಂದಿದೆ. ಆದ್ದರಿಂದ ನಾವು ಇಲ್ಲಿ ಮಾತನಾಡಬೇಕಾಗಿದೆ ಯಾವ ಯಾವುದರಲ್ಲಿ ಎನೇನು ಮಹತ್ವ ಅಡಗಿದೆಯೋ ನಮಗೆ ಗೊತ್ತಿಲ್ಲ. ನಮಗೆ ನಮ್ಮ ಬೆನ್ನು ಕಾಣುವುದಿಲ್ಲ ಮಾನ್ಯ ಇಬ್ರಾಹಿಂರವರನ್ನು ಮಂತ್ರಿಮಂಡಲದಿಂದ ಕೈ ಬೀಡಬೇಕೆಂದು ನಾವು ಒಬ್ಬರೆ ಹೇಳುತ್ತಿಲ್ಲ. ಎಲ್ಲರೂ ಕೂಡ ಹೇಳುತ್ತಿದ್ದಾರೆ. ಆದ್ದರಿಂದ ಅವರನ್ನು ಕೈಬಿಡುವುದು ಒಳ್ಳೆಯದು. ಏನೋ ಅದೃಷ್ಟ ಹೊಡೆಯಿತು, ಅವರು ಮಂತ್ರಿ ಗಳಾದರು. ಈವತ್ತಿನ ದಿವಸ ಅದೃಷ್ಟ ಹೊಡೆದರೆ ಯಾರು ಬೇಕಾದರೂ ಮಂತ್ರಿಗಳಾಗಬಹುದು,

ದುರಾದೃಷ್ಟ ಹೊಡೆದರೆ ಇರತಕ್ಕಂಥ ಮಂತ್ರಿಪದವಿಯನ್ನೂ ಕಳೆದುಕೊಳ್ಳಬಹುದು. ಹಿಂದೆ ಅವರು ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಮಾಡಿದ ಭಾಷಣವನ್ನು ನಾವು ಕಿವಿಯಾರೆ ಕೇಳಿದ್ದೇವೆ. ಮಾನ್ಯ ಬೇಗಾನೆ ರಾಮಯ್ಯನವರಿಗೂ ಗೊತ್ತಿರುತ್ತದೆ. ಈಪತ್ತು ಆಪರಿಗೆ ಅದೃಷ್ಟ ಹೊಡೆದಿದ್ದರಿಂದ ಅವರು ಆಲ್ಲಿ ಕುಳಿತಿದ್ದಾರೆ. ನಾವು ಇಲ್ಲಿ ಕುಳಿತಿದ್ದೇವೆ. ನಾನು ಈ ವಿಚಾರವನ್ನು ಮಾನ್ಯ ಇಬ್ರಾಹಿಂರವರಿಗೆ friendly ರೀತಿ ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಮಾತನಾಡುತ್ತಾ ಅದೃಷ್ಟದಗಾಳಿ ಯಾವರೀತಿ ಬಡಿಯುತ್ತದೆ ಎಂಬುದರ ಬಗ್ಗೆ ಹೇಳಿದರು.....

ಶ್ರೀ ಕೆ ಎಚ್. ಶ್ರೀನಿವಾಸ್.—ಮಾನ್ಯ ಮುಖ್ಯಮಂತ್ರಿಯವರು ನಿಮಗೆ ಸಂಪೂರ್ಣವಾಗಿ ಒಂದು ಹೊಸ ಶಕ್ತಿಯನ್ನು ಕೊಟ್ಟಿದ್ದಾರೆ. ಇದರಿಂದ ನಿಜವಾಗಿಯೂ ಕೂಡ ನಾವು ತತ್ತರಿಸಿದ್ದೇವೆ. ನಿಮ್ಮನ್ನು ಯಾವ ಪುಟ್ಟಕ್ಕೆ ಏರಿಸಿ ಕುಳಿಸಿದ್ದಾರೆ ಎಂದರೆ ಮೊನ್ನೆ ದಿವಸ ಶ್ರೀ ಜೆ. ಎಚ್. ಪಟೀಲರವರು ಒಂದು ಮಾತನ್ನು ಹೇಳಿದರು. ನೋಡುವುದಕ್ಕೆ ಚೆನ್ನಾಗಿಲ್ಲದ ಹೆಣ್ಣು ಹುಡುಗಿಗೆ ಒಳ್ಳೆಯ ಗಂಡ ಸಿಕ್ಕಿದರೆ ಆರುತಿಂಗಳಿಗೆ ಬಹಳ ಲಕ್ಷಣವಾಗಿ ಕಾಣುಸುತ್ತಾಳೆ. ಆದೇ ರೀತಿ ಕೆಲವು ಹುಡುಗಿಯರು ಬಹಳ ಲಕ್ಷಣವಾಗಿದ್ದು ಒಳ್ಳೆಯ ಗಂಡ ಸಿಕ್ಕಿದರೂ ಕೂಡ ಆರೇ ತಿಂಗಳಿಗೆ ಮುದಕಿಯ ಹಾಗೆ ಆಗುತ್ತಾರೆ. ಆದ್ದರಿಂದ ಆದೃಷ್ಟ ದುರಾದೃಷ್ಟಗಳು ಯಾರಿಗೆ ಯಾವಾಗ ಹೊಡೆಯುತ್ತವೆಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಸಚಿವರಾದ ಶ್ರೀ ಇಬ್ರಾಹಿಂರವರು ಮಂತ್ರಿಯಾಗಿರುವುದು ಜೇಡವೆಂದು ಈ ಸದನದ ಎರಡೂ ಕಡೆಯ ಪಕ್ಷದವರೂ ಹೇಳುತ್ತಿರುವುದರಿಂದ ಈ ಪ್ರಕರಣದ ಬಗ್ಗೆ ತನಿಖೆ ಮಾಡಿಸುವ ವಿಷಯವನ್ನು ತಾವು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ಕಮಿಷನ್ ಆಫ್ ಎನ್‌ಕ್ವೈರಿಗೆ ದಾರಿ ಮಾಡಿಕೊಡುವ ಸಲುವಾಗಿ ಆಪದ್ಧನ್ನು ತಮ್ಮ ಮಂತ್ರಿಮಂಡಲದಿಂದ ಕೈ ಬಿಡುವುದು ಸೂಕ್ತವಾದುದೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇದೆಲ್ಲಾ ಆದಮೇಲೆ ನಾವು ಬಿಲ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಈಗ ಸಭೆಯನ್ನು ಮಧ್ಯಾಹ್ನ ೩.೦೦ ಗಂಟೆಯವರೆಗೂ ಮುಂದೂಡಲಾಗಿದೆ.

(ಸಭೆಯು ೧-೦೦ ಗಂಟೆಗೆ ಮುಕ್ತಾಯಗೊಂಡಿತು.)

(The House re assembled at Three of the Clock.)

[MR. SPEAKER SRI P. VENKATARAMANA in the Chair.]

† SRI. C. M. ARUMUGHAM.—Mr. Speaker sir, I had the occasion to raise this point regarding issue of licences to 13 roller flour mills and I am happy that this subject has been taken up this morning in the form of motion of enquiry I heard the speech of Sri K. H. Srinivas. Of course, he has covered almost all the points that I have already raised on the floor of the House. I was under the impression that when the motion was moved, our Hon. Leader of the Opposition would be here and initiate the discussion. I was told that he has gone to Bombay, and therfore in his absence, Sri K. H. Srinivas has taken it up. Of course, who raised the issue is not a matter which bothers me but I must substantiate this when it has come in the form of a motion. I am not going to change my stand. What all I have said, I stand by that. Nothing in this country, or in the State or circumstances can change my stand. In the first instance I would like to make it very clear that I am not biassed and I am not against any individual Minister. The personality has nothing to do

with me. It is only on the policy of the Government that I attack and it is directed against Sri C. M. Ibrahim, who is the Minister incharge of Labour Portfolio. It makes hardly any difference for me whether Sri C. M. Ibrahim was in Janata or is in Congress-(I). Who knows, tomorrw he may join Janata or Congress. Therefore, I do not attach much importance to all these things, Sir, there is nothing like politices in raising this issue. In fact, I have absolutely nothing against Sri Ibrahim irrespective of, whether he is on this side or that side. Noting. I am only concerned with the office he holds. I would like to submit sir, I was the first man to raise about the 'Sharavathi Scandal' in the year 1957-58. Subsequently, it spread like fire in a forest. The successive Chief Minister was supposed to be involved. Therefore, it is not the person that I am concerned, but I am concerned with the post he holds. Therefore. I have taken up this issue, this stand to bring it to the notice of this House. Nobody could influence me. Nobdy could ask me to deter. Therefore, my first submission is to consider the need and necessity to issue 13 licences at a time. Was there any need to issue 13 licences to four mills at a time ? That is the poinit here. There was absolutely no need to issue so many licences.

The Deputy Secretary was coerced or pressurised by the Minister to issue 15 licences. It is very difficult, under these circumstances, for any honest officer to work. When he was asked to issue licences the Deputy Secretary did not agree. Being a responsibile Officer it was not possible for him to listen to the advise of the Ministe. to issue lincences. Therefore, the Deputy Secretary went on leavr or rather I should say, he was forced by the Minister to go on leavee

I am glad our Hon. Chief Minister was saying yesterday that he wants to improve the efficiency of the general administration and that he wanted to give freedom to the officer who acts strictly according to the rules and regulations. Unless an officer is given freedom to act according to rules, it is not possible for him to discharge his duties fearlessly. Within the frame-work of rules the officer is required to discharge his duties. If pressure is brought upon on an officer, things will go certain way; it will be very diff cult for an officer to act within the rules. There was a time when some officer used to put up notes and get the approval of the Minister. Now those days are gone. Such kind of officers and Ministers were there in those days. For an honest officer, there is no place for them to work independently. If the Chief Minister allows them to work independently, then only it is possible for the officers to function well.

I want to bring to the notice of the Government about the issue of licences to flour mills. Formerly, the Director of Food and Civil Supplies was vested with po ers to issue the licences. I don't know why this power was withdrawn and if so by whom. I charge the Minister who is in-charge of this portfoilo, not Sri C. M. Ibrahim but the former Minister who was in-charge of the portfolio of Civil Supplies, He wanted some licences to be issued to his favourities. The Director of Food and Civil Supplies was a strong man. He did not yield to the pressure of the Minister. In order to avoid such unpleasentness, the power vested with the Director of Food and Civil Supplies was with drawn by the then Government, I mean Devaraj Urs Government, And then this power was vested with the Deputy Secre'ary so that he will be at the back and call of the Minister in-charge. The Hon. Chief Minister should find out how many licences were issued after with drawing power from the Director of Food and Civil Supplies. He must also find out whether the Licences issued by the Deputy Secretary are valid or not. This point is also necessary for conducting an enquiry into the matter. In this connection I may bring to your notice that the concerned Minister went to Thirupathi, I think not to worship but to help somebody. When the power was with-drawn from the Director of Food and Civil Supplies, there was a Government order, But there was no Government Order for vesting this power in the Under Secretary, There are some powers vested with the Deputy Commissioner. When the Deputy Commissioner goes on leave, his headquarters assistant will exercise some of his powers but he will not exercise all the powers that are conferred under the rules on the Deputy Commissioner. In the present case, the powers ve.ted with the Deputy Secretasy are xclusively meant for Deputy Secretary only and not the Under Secretary. I would like to know whether the pow ers vested in the Deputy Secretary can be exercised by the Under Secretary when the Deputy Secretary goes on leave.

The Under Secretary who exercised this power retired from service from 1st July '80. The Under Secretary who was to retire from 1ts July was directed to issue 131 cences all at a time. I want to bring to the notice of the Chief Minister that the issue of licences was not known to others. Those who are in the trade, they only know how to apply and get the licences. The interested persons applied for the licences and get these licences to their relatvee ,

I told you last time Sir, these two persons i.e,, Kalyanpura Flour Mills Pvt. Ltd., Sri Bansilal and Belgaum Roller Flour Mills Pvt. Ltd., Sri Shanthilal belong to one family. And then, Sri Bagri of Bangalore has got a Flour Mill at Belgaum and also at Chika-

magalur. Here also two flour mills to one family have been given. I was happy the Sri Kanakraj, a man from Kolar, has been given a flour Mill at Kolar but to my surprise, I found that actually this flour Mill has not been given to a Kolar Man. It is given to a Bangalore man by name Sri Venugopal. Venugopal is already having one flour mill. What I am trying to make out is that you are giving two or three licences to one family. I am always opposed to these vested interests, I am opposed to these Land-lords, industrialists and smugglers. I am also opposed to these Marwaris who have come here and have got flour mills. I would like to ask one thing. Can a Kannidaga have a flour mill in Rajasthan or Gujarath? It is impossible. If you say "Gowda", he is from Karnataka. If you say "Appa" he is from Karnataka. He will never get licences either in in Rajasthan or Gujarath the birth place of Mahatma Gandhi. Kannadigas are not entertained they are not entertained in Uttar Pradesh the Ganges valley. They will never allow you. We are very good people and we permit them. I charge the Karnataka Financial Corporation. It gives loans to the extent of Rs.20/-Lakhs to outsiders Why don't you stop it? I thought that my friend Sri C. M. Ibrahim would help to the people from Karnataka because I was seeing him speaking very good kannada.

I am the follower of hon. Member Sri H. D. Deve Gowda If he supports the Government, I will also support the Government.

SRI MICHAEL FERNANDES.—Does it then mean that whenever Sri C. M. Arumugham supports the Government Sri H. D. Deve Gowda also supports the Government?

SRI C. M. ARUMUGHAM.—There is an understanding between me and Sri Deve Gowda. Therefore, if Sri Deve Gowda says "Support Gundu Rao", I will support Gundu Rao blindly, If Sri Devegowda says Oppose" I will oppose blindly. There is a reason for it. Sri Deve Gowda has got 20 years experience in this House, .He is very intelligent and diplomatic politician, Sri S. R. Bommai is also diplomatic. But Sri H. D. Deve Gowda is more diplomatic than Sri S. R. Bommai. He may not appear like that outwardly. But he is a very astute politician. Therefore, I agree to support Sri Gundu Rao's Government. How long I am going to support Sri Gundu Rao's Government depends upon how long Sri H. D. Deve Gowda is going to support Gundu Rao's Government.

If Kannadigas go outside Karnataka, the other People State do not permit them. I am asking a simple question. Why should you not help the sons of the soil as Sri. S. M. Krishna put it ? You must see to it, I tell you, persons who are in Hotel businesse.g., Kamath,

f they apply, they will be knowing the business full well, and they will get licence. Likewise those who are in the field of textiles, apply and get licences ; those who are in the field of industry, they will apply and get the licence. Similarly, this case of roller flour mill. They know the secret and they have got it. But you have not given the licences to the sons of the soil. Let them man local get and become a big man otherwise the outsiders come, make money and go to their State. You know what our Sri C. M. Narain Swamy, agriculturist says. He says,

> ' You have taken loan and you should not return. Why you have taken ? To dig a well, You have dug the well and improved the land. That is the improved of the nation. Therefore, why should I return the Loan ?''

I can appreciate if he has given licence to the local people, If it is not done so, it is against the Constitution. Article 39 of our Constitution reads like this :

> ' (b) that the ownership and control of the material resources of the community are so distributed as best to subserve the common good ;''

It must be so distributed among the people that it is not concentrated in one family-husband, wife, son, daughter or son-in-law etc. It should not be done Wealth should not be concentrated in one family. It should serve the common good. Further, Sub-section (c) of Article 39 reads thus :

> "(c) that the operation of the economic system does not result in the concentration of wealth and means of production to the common determent ;''

The wealth should be distributed for the betterment of the people and not for a few persons. But the Government is doing it. Take for example Tata and Birla. And in this case of Flour Mills also the Government has given licences to two or three families. That is against the constitution. It is the violation of the Constitution which the Hon. Chief Minister must note dowe. I is a violation of constitution indulging in illegal activities by helping a few individuals to concentrate wealth. These are the things. I have said, the Under Secretary has had a deal of Rs. 30 Lakhs, Further, I will say

how our Constitution experts like Dr, Babasaheb Ambedkar and others have taken this idea from the Russian Constitution. I just want to read and it is interesting ;

> "The land. its minerals wealth, waters, forests, the factories and mines, the rail, water and air transport facilities, the banks, the means of communication, large state-organised agricultural enterprises (State farms, machine and tractor stations, etc.,) as well as municipal enterprises and the bulk of the dwelling houses in the cities and industrial localities are state property, i.e., belonging to the whole people."

3-30 P.M.

